# ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1963

(ಕರ್ನಾಟಕ ರಾಜ್ಯಪತ್ರ, ಗುರುವಾರ, ಜನವರಿ 10, 2008, ಭಾಗ – IVಎ, 25 ರಿಂದ 50ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ).

## ಪ್ರಕರಣಗಳ ಅನುಕ್ರಮಾಣಿಕೆ

### ಅಧ್ಯಾಯ – I

**ಪ್ರಕರಣಗಳು** **ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ – II

### ವಿಶ್ವವಿದ್ಯಾನಿಲಯಗಳು

3. ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ನಿಗಮನ
4. ವಿಶ್ವ ವಿದ್ಯಾನಿಲಯದ ಉದ್ದೇಶಗಳು
5. ವಿಶ್ವ ವಿದ್ಯಾನಿಲಯಕ್ಕೆ ಪ್ರವೇಶ
6. ವಿಶ್ವ ವಿದ್ಯಾನಿಲಯದ ಅಧಿಕಾರಗಳು
6ಎ. ಸಂಯೋಜನೆ ಅಥವಾ ವಿಶೇಷ ಸವಲತ್ತು, ಇತ್ಯಾದಿಗಳಿಗೆ ಅನುಮತಿ
7. ಕೆಲವು ಕಾಲೇಜುಗಳು ಮತ್ತು ಸಂಸ್ಥೆಗಳನ್ನು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡುವುದು
7ಎ. ಕೆಲವು ಕಾಲೇಜುಗಳನ್ನು ಮತ್ತು ಸಂಸ್ಥೆಗಳನ್ನು ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡುವುದು
8. ಪರಿಶೀಲನೆ ಮತ್ತು ನಿಯಂತ್ರಣ

### ಅಧ್ಯಾಯ – III

### ವಿಶ್ವವಿದ್ಯಾನಿಲಯದ ಅಧಿಕಾರಿಗಳು

9. ವಿಶ್ವವಿದ್ಯಾನಿಲಯದ ಅಧಿಕಾರಿಗಳು
10. ಕುಲಪತಿ
11. ಸಹ – ಕುಲಪತಿ
12. ಉಪ – ಕುಲಪತಿ
13. ಉಪ – ಕುಲಪತಿಯ ಅಧಿಕಾರಗಳು ಮತ್ತು ಕರ್ತವ್ಯಗಳು
14. ಡೀನ್
15. ಲೆಕ್ಕ ನಿಯಂತ್ರಕ
16. ರಿಜಿಸ್ಟ್ರಾರ್
17. ಗ್ರಂಥ ಪಾಲಕ

18. ಶಿಕ್ಷಣ ನಿರ್ದೇಶಕರು

19. ಸಂಶೋಧನಾ ನಿರ್ದೇಶಕ

20. ವಿಸ್ತರಣಾ ನಿರ್ದೇಶಕ

21. ವಿಭಾಗಗಳ ಮುಖ್ಯಸ್ಥರು

22. ವಿಶ್ವವಿದ್ಯಾನಿಲಯದ ಅಧಿಕಾರಿಗಳು ಶಾಸನಗಳ ಮೂಲಕ ಉಪಬಂಧಿಸಿರುವುದರ ಹೊರತು ಯಾವುದೇ ಇತರ ಸಂಭಾವನೆಯನ್ನು ಸ್ವೀಕರಿಸಬಾರದು.

23. ಇತರ ಅಧಿಕಾರಿಗಳು

**ಅಧ್ಯಾಯ – IV**

**ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು**

24. ವಿಶ್ವವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು

25. ಮಂಡಳಿಯ ರಚನೆ

26. ಮಂಡಳಿಯ ಅಧಿಕಾರಗಳು ಮತ್ತು ಕರ್ತವ್ಯಗಳು

27. ಶೈಕ್ಷಣಿಕ ಪರಿಷತ್ತು

28. ಶೈಕ್ಷಣಿಕ ಪರಿಷತ್ತಿನ ಅಧಿಕಾರಗಳು

28ಎ. ಹಣಕಾಸು ಸಮಿತಿ

29. ಅಧ್ಯಯನ ಮಂಡಳಿಗಳು

**ಅಧ್ಯಾಯ – V**

**ವಿಶ್ವವಿದ್ಯಾನಿಲಯದ ನಿಧಿಗಳು**

30. ಸಾಮಾನ್ಯ ನಿಧಿಗಳು

31. ಮೂಲ ನಿಧಿ

32. ನಿವೃತ್ತಿ ವೇತನ ಮತ್ತು ಭವಿಷ್ಯ ನಿಧಿಗಳು

33. ಇತರ ನಿಧಿಗಳು

34. ನಿಧಿಗಳ ನಿರ್ವಹಣೆ

35. ಸರ್ಕಾರದ ಅನುದಾನಗಳು

36. ಲೆಕ್ಕ ಪರಿಶೋಧನೆಗೆ ಆದೇಶಿಸಲು ಸರ್ಕಾರದ ಅಧಿಕಾರ

37. ಹಣಕಾಸು ಅಂದಾಜುಗಳು

38. ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ

**ಅಧ್ಯಾಯ – VI**

**ಶಾಸನಗಳು ಮತ್ತು ವಿನಿಮಯಗಳು**

39. ಶಾಸನಗಳು

40. ಶಾಸನಗಳ ರಚನೆ ಹೇಗೆ

41. ವಿನಿಯಮನಗಳು

## ಅಧ್ಯಾಯ – VII

### ಸಂಕೀರ್ಣ

42. ಪದವನ್ನು ತೆರವು ಮಾಡುವುದು
43. ಆಕಸ್ಮಿಕ ಖಾಲಿಸ್ಥಳಗಳನ್ನು ಭರ್ತಿ ಮಾಡುವುದು
44. ಕೃತ್ಯಗಳು ಮತ್ತು ವ್ಯವಹರಣೆಗಳ ಸಿಂಧುತ್ವದ ಉಳಿಸುವಿಕೆ
45. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ರಚನೆಯ ಬಗ್ಗೆ ವಿವಾದಗಳು
46. ಅಧಿಕಾರಗಳ ಪ್ರತ್ಯಾಯೋಜನೆ
47. ವಿಶ್ವವಿದ್ಯಾನಿಲಯದ ಕೆಲವು ಅಧಿಕಾರಿಗಳ ತಾತ್ಕಾಲಿಕ ನೇಮಕಕ್ಕೆ ಉಪಬಂಧ
47ಎ. ಸಮನ್ವಯ ಸಮಿತಿ
48. ಕೃತ್ಯಗಳು ಮತ್ತು ಆದೇಶಗಳ ರಕ್ಷಣೆ
49. ತೊಂದರೆಗಳ ನಿವಾರಣೆ
ಅಧಿಸೂಚನೆಗಳು

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**1963ರ ಅಧಿನಿಯಮ 22.–** ಭಾರತ ಮತ್ತು ಇತರ ಬೇರೆ ಬೇರೆ ರಾಷ್ಟ್ರಗಳಲ್ಲಿನ ಕೃಷಿ ಉತ್ಪಾದನೆ ಕುರಿತು ಕೃಷಿ ವಿಜ್ಞಾನ ತಜ್ಞರು ನಡೆಸಿದ ಪರಿಶೋಧನೆಗಳು ಇತರ ರಾಷ್ಟ್ರಗಳ ಇಳುವರಿಗೆ ಹೋಲಿಸಿದರೆ ಭಾರತದಲ್ಲಿನ ಪ್ರತಿ ಎಕರೆಯ ಇಳುವರಿಯು ಕಡಿಮೆಯಿದೆ ಎಂಬುದನ್ನು ತೋರಿಸಿವೆ. ಉತ್ತಮ ಬೇಸಾಯ ಪದ್ಧತಿಗಳನ್ನು ಅನುಸರಿಸುವ ಮೂಲಕ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸಲು ಅಪಾರವಾದ ಸಾಧ್ಯತೆಗಳಿವೆ. ಈ ಗುರಿ ಸಾಧನೆಗಾಗಿ ಉತ್ಪಾದನೆಯನ್ನು ಹೆಚ್ಚಿಸಲು ನೆರವಾಗುವ ಸಲುವಾಗಿ ಒಂದೆಡೆ ಕೃಷಿ ವಿಜ್ಞಾನಗಳಲ್ಲಿ ವಿದ್ಯಾರ್ಥಿಗಳ ತರಬೇತಿ ಕಾರ್ಯಕ್ರಮ ಮತ್ತು ಇನ್ನೊಂದೆಡೆ ಈ ಸುಧಾರಣೆಗಳ ಪ್ರಯೋಜನಗಳು ಸಾಗುವಳಿದಾರರಿಗೆ ದೊರೆಯುವಂತೆ ಮಾಡುವ ವಿಸ್ತರಣಾ ಸೇವೆಯೊಂದಿಗೆ ನಿಕಟ ಸಂಪರ್ಕವುಳ್ಳ ಪ್ರಗತಿಪರ ಸಂಶೋಧನಾ ಶಿಕ್ಷಣ ಸಂಸ್ಥೆಯೊಂದನ್ನು ರಾಜ್ಯದಲ್ಲಿ ಹೊಂದಿರುವುದು ಅಗತ್ಯವಾಗಿದೆ.

ರಾಜ್ಯದಲ್ಲಿ ಆಹಾರ ಉತ್ಪಾದನೆಯಲ್ಲಿ ತೀವ್ರವಾದ ಹೆಚ್ಚಳವನ್ನು ತುರ್ತಾಗಿ ಸಾಧಿಸಬೇಕಾಗಿರುವುದರಿಂದ, ಕೃಷಿ ಸೇವೆಯಲ್ಲಿ ಪ್ರಸ್ತುತ ರೂಢಿಯಲ್ಲಿರುವ ಕೃಷಿ ವಿಧಾನಗಳು, ಪಶುಸಂಗೋಪನಾ ಶಿಕ್ಷಣ ಮತ್ತು ಸಂಶೋಧನೆಗಳಂಥ ಮೂಲಭೂತ ಚಟುವಟಿಕೆಗಳ ನಡುವೆ ಅತ್ಯುತ್ತಮ ಮಟ್ಟದ ಸಮನ್ವಯತೆಯನ್ನು ತರುವ ಉದ್ದೇಶದೊಂದಿಗೆ ಈ ಮೂಲಭೂತ ಚಟುವಟಿಕೆಗಳ ಪುನರ್ವ್ಯವಸ್ಥೆ ಮತ್ತು ಸಂಘಟನೆಯು ಅವಶ್ಯವಾಗಿದೆ. ಈ ಉದ್ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV- 2ಎ, ದಿನಾಂಕ 1963ರ ಫೆಬ್ರವರಿ 16ರಲ್ಲಿ ಪುಟ 257ರಲ್ಲಿ ಸಂ.26 ಎಂದು ಪ್ರಕಟವಾಗಿದೆ).

**II**

**1976ರ ತಿದ್ದುಪಡಿ ಮಾಡುವ ಅಧಿನಿಯಮ 3.–** ಮೂಲತಃ ಕೃಷಿ ಶಿಕ್ಷಣಕ್ಕೆ ಉತ್ತೇಜನ ನೀಡುವುದೇ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಅಧೀನದಲ್ಲಿನ ಶೈಕ್ಷಣಿಕ ಸಂಸ್ಥೆಗಳ ಉದ್ದೇಶವಾಗಿದೆ. ಆದುದರಿಂದ ಕೃಷಿಯಲ್ಲಿ ಮತ್ತು ಸಂಬಂಧಪಟ್ಟ ವಿಷಯಗಳಲ್ಲಿ ಉತ್ತಮ ಹಿನ್ನೆಲೆಯನ್ನು ಹೊಂದಿರುವ "ಕೃಷಿಕ" ಕುಟುಂಬಗಳಿಂದ ಬರುವ ವಿದ್ಯಾರ್ಥಿಗಳು, ಆ ವಿಷಯಗಳಲ್ಲಿ ಉನ್ನತ ಶಿಕ್ಷಣದ ಮತ್ತು ಪ್ರಗತಿಪರ ತಿಳಿವಳಿಕೆಯ ಸೌಲಭ್ಯವನ್ನು ಪಡೆಯಬೇಕು. ಕೃಷಿ, ಪಶುವೈದ್ಯ ಮತ್ತು ಮೀನುಗಾರಿಕೆ ಮತ್ತು ಕೃಷಿವಿಜ್ಞಾನಗಳ ವಿಶ್ವವಿದ್ಯಾನಿಲಯದ ಇತರ ಸಂಸ್ಥೆಗಳಲ್ಲಿ ಪ್ರವೇಶ ಪಡೆಯ ಬಯಸುವ ಅಭ್ಯರ್ಥಿಗಳ ಅರ್ಹತೆಯನ್ನು ನಿರ್ಣಯಿಸುವುದಕ್ಕೆ ಸೂಕ್ತ ಶೈಕ್ಷಣಿಕ ಗುಣಮಟ್ಟದ ಜೊತೆಗೆ ಗ್ರಾಮೀಣ ಹಿನ್ನೆಲೆ, ಕೃಷಿ ಪದ್ಧತಿಗಳಲ್ಲಿ ಪಡೆದಿರುವ ವಾಸ್ತವಿಕ ಅನುಭವವನ್ನು ಸಮರ್ಥಿಸುವ ಕ್ಷೇತ್ರದ ಬಗೆಗಿನ ಒಲವೂ ಸಹ ಸೂಕ್ತ ಮಾನದಂಡವಾಗುತ್ತದೆ. "ಕೃಷಿಕರು" ವರ್ಗದಲ್ಲಿ ಬರುವ ವಿದ್ಯಾರ್ಥಿಗಳ ಸರಿಯಾದ ಆಯ್ಕೆಗಾಗಿ ಸಮರ್ಪಕವಾಗಿ ಎಲ್ಲ ವಿಚಾರಗಳಲ್ಲೂ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವುದು ಸೂಕ್ತವೆಂದು ಸರ್ಕಾರವು ಪರಿಗಣಿಸಿದೆ. ಆದ್ದರಿಂದ, "ಕೃಷಿಕರು" ವರ್ಗದಡಿ ಬರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ರಾಜ್ಯಸರ್ಕಾರವು ನಿರ್ದಿಷ್ಟಪಡಿಸುವಂಥ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಉಪಬಂಧ ಕಲ್ಪಿಸಲಾಗಿದೆ. "ಕೃಷಿಕರು" ಆಗಿ ಅಭ್ಯರ್ಥಿಗಳು ಹೊಂದಿರುವ ವಾಸ್ತವಿಕ ಹಿನ್ನೆಲೆಯನ್ನು ನಿರ್ಧರಿಸಲು ಅಂಥ ಕಾರ್ಯ ವಿಧಾನವು ಯುಕ್ತವಾದುದೆಂದು ಕಂಡುಬಂದಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV– 2ಎ, ದಿನಾಂಕ 1976ರ ಜನವರಿ 15ರಲ್ಲಿ ಪುಟ 2–3 ರಲ್ಲಿ ಪ್ರಕಟಿಸಲಾಗಿದೆ).

**III**

**1985ರ ತಿದ್ದುಪಡಿ ಮಾಡುವ ಅಧಿನಿಯಮ 36.–** ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಅನುಮೋದನೆ ಪಡೆಯದೆ ಅಧ್ಯಯನದ ಬೇರೆ ಬೇರೆ ವಿಭಾಗಗಳಲ್ಲಿ ವಿಶೇಷವಾಗಿ ಪಶುವೈದ್ಯ ಮತ್ತು ಪಶುವಿಜ್ಞಾನಗಳಲ್ಲಿ ಶಿಕ್ಷಣ ನೀಡಲು ಕಾಲೇಜುಗಳನ್ನು ಪ್ರಾರಂಭಿಸುವುದಕ್ಕಾಗಿ ಕೆಲವು ಖಾಸಗಿ ವ್ಯಕ್ತಿಗಳು ಸಹಕಾರ ಸಂಘಗಳನ್ನು ರಚಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಮೀಸಲಿರಿಸಿದ ಕ್ಷೇತ್ರದಲ್ಲಿ ಶಿಕ್ಷಣ ನೀಡುವಂಥ ಖಾಸಗಿ ಕಾಲೇಜುಗಳು ರಾಜ್ಯದ ವಿದ್ಯಾರ್ಥಿ ಸಮುದಾಯದ ಹಿತಾಸಕ್ತಿಗೆ ಧಕ್ಕೆಯುಂಟುಮಾಡಲು ಅವಕಾಶ ನೀಡತಕ್ಕದ್ದಲ್ಲವೆಂಬ ಅಭಿಪ್ರಾಯವನ್ನು ವಿಧಾನ ಮಂಡಲದ ಉಭಯ ಸದನಗಳಲ್ಲೂ ವ್ಯಕ್ತಪಡಿಸಲಾಗಿದೆ. ಈ ವಿಷಯದಲ್ಲಿ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದೆ. ಈ ಭರವಸೆಯ ಪ್ರಕಾರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧ್ಯಾದೇಶ, 1985ನ್ನು (1985ರ ಕರ್ನಾಟಕ ಅಧ್ಯಾದೇಶ 13) ಜಾರಿಗೊಳಿಸಲಾಗಿದೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶಕ್ಕೆ ಬದಲಾಗಿ ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV– 2ಎ, ದಿನಾಂಕ 1985ರ ಆಗಸ್ಟ್ 7ರಲ್ಲಿ ಪುಟ 3ರಲ್ಲಿ ಸಂ.428 ಎಂದು ಪ್ರಕಟಿಸಲಾಗಿದೆ.)

**IV**

**1986ರ ತಿದ್ದುಪಡಿ ಮಾಡುವ ಅಧಿನಿಯಮ 14.–** ಕರ್ನಾಟಕ ರಾಜ್ಯವು ರಾಷ್ಟ್ರದಲ್ಲಿಯೇ ಅತ್ಯಂತ ವೈವಿಧ್ಯಮಯ ಬೆಳೆ ಪದ್ಧತಿ ಹೊಂದಿರುವಂಥ ರಾಜ್ಯವಾಗಿದೆ. ಈಗಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿಯು

ಬೆಂಗಳೂರಿನಲ್ಲಿ ಇದ್ದು, ಅದು ರಾಜ್ಯದಲ್ಲಿ 6 ಬೋಧಕ ಆವರಣಗಳನ್ನು ಮತ್ತು 44 ಸಂಶೋಧನಾ ಕೇಂದ್ರಗಳನ್ನು ಹೊಂದಿದೆ. ವಿಶ್ವವಿದ್ಯಾನಿಲಯವು, ಕಳೆದ ಎರಡು ದಶಕಗಳಿಂದ ಈ ದಿಶೆಯಲ್ಲಿ ತ್ವರಿತ ಹೆಜ್ಜೆಯನ್ನು ಹಾಕಿದ್ದರೂ, ಅದಕ್ಕೆ ಇಡೀ ರಾಜ್ಯದ ಬೇರೆ ಬೇರೆ ಪ್ರದೇಶಗಳ ನಿರ್ದಿಷ್ಟ ಅಗತ್ಯತೆಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ವಿಶಾಲವಾದ ಕಪ್ಪು ಮಣ್ಣಿನ ಪ್ರದೇಶವನ್ನು ಹೊಂದಿರುವ ಉತ್ತರದ ಜಿಲ್ಲೆಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಸ್ವರೂಪವು ನೀರಾವರಿ ಮತ್ತು ಖುಷ್ಕಿ ಬೇಸಾಯಗಳೆರಡರ ಸಂಬಂಧದಲ್ಲಿ ದಕ್ಷಿಣದ ಜಿಲ್ಲೆಗಳಿಗಿಂತ ತೀರಾ ಭಿನ್ನವಾಗಿದೆ. ತುಂಗಭದ್ರಾ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆ, ಘಟಪ್ರಭಾ ಮತ್ತು ಮಲಪ್ರಭಾಗಳಂಥ ಭಾರಿ ನೀರಾವರಿ ಯೋಜನೆಗಳು ಹೆಚ್ಚಿನ ಕೃಷಿ ಉತ್ಪಾದನೆಗೆ ಮಹತ್ತರವಾದ ಅವಕಾಶವನ್ನು ನೀಡಿವೆ.

ಹೀಗೆ, ದೀರ್ಘ ಕಾಲದ ಬೇಡಿಕೆಯನ್ನು ಈಡೇರಿಸುವ ಸಲುವಾಗಿ ಧಾರವಾಡದಲ್ಲಿ ಎರಡನೇ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಧಾರವಾಡದಲ್ಲಿ ಎರಡನೇ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸ್ಥಾಪನೆಯೊಂದಿಗೆ ಈ ವಲಯದಲ್ಲಿ ಕೃಷಿ ಅಭಿವೃದ್ಧಿಗೆ ಸಂಪೂರ್ಣ ಬೆಂಬಲ ನೀಡುವ ಸಲುವಾಗಿ ಸಂಶೋಧನೆ, ಬೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳನ್ನು ತೀವ್ರಗೊಳಿಸಲಾಗುವುದು.

ಧಾರವಾಡದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸ್ಥಾಪನೆ ಕುರಿತಂತೆ, ಈಗಿರುವ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಯುಕ್ತವೆಂದು ಪರಿಗಣಿಸಲಾಗಿದೆ. ತಿದ್ದುಪಡಿಯಲ್ಲಿ ಸೇರಿಸಲಾದ ಪ್ರಮುಖ ಬದಲಾವಣೆಗಳೆಂದರೆ:–

(ಎ) ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ನಿರ್ಧರಿಸುವುದು;

(ಬಿ) ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುವ ರೀತಿಯನ್ನು ಗೊತ್ತುಪಡಿಸುವುದು, ಸಿಬ್ಬಂದಿಯ ವರ್ಗಾವಣೆ ಮತ್ತು ಆಸ್ತಿ ಮತ್ತು ಹೊಣೆಗಾರಿಕೆಗಳ ಹಂಚಿಕೆ;

(ಸಿ) ರಾಜ್ಯದಲ್ಲಿನ ಎರಡೂ ವಿಶ್ವವಿದ್ಯಾನಿಲಯಗಳ ನಡುವೆ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಚಟುವಟಿಕೆಗಳ ಸಮನ್ವಯ ಸಾಧಿಸುವುದು; ಮತ್ತು

(ಡಿ) ಧಾರವಾಡದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ಮತ್ತು ಕಾರ್ಯನಿರ್ವಹಣೆಗಾಗಿ ತಾತ್ಕಾಲಿಕ ಉಪಬಂಧಗಳು.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV– 2ಎ, ದಿನಾಂಕ 1986ರ ಮಾರ್ಚ್ 17ರಲ್ಲಿ ಪುಟ 9ರಲ್ಲಿ ಸಂ.204 ಎಂದು ಪ್ರಕಟಿಸಲಾಗಿದೆ).

## V

**1987ರ ತಿದ್ದುಪಡಿ ಮಾಡುವ ಅಧಿನಿಯಮ 40.–** ಎರಡನೇ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಧಾರವಾಡದಲ್ಲಿ ಸ್ಥಾಪಿಸಲು ರಾಜ್ಯಸರ್ಕಾರವು, ವಿಶ್ವವಿದ್ಯಾನಿಲಯದ ಅನುದಾನಗಳ ಆಯೋಗ ಅಧಿನಿಯಮದ ಅಡಿಯಲ್ಲಿ ಮಾನ್ಯತೆಯ ಮಂಜೂರಾತಿ ಮತ್ತು ಕೇಂದ್ರದ ನೆರವನ್ನು ಪಡೆಯುವಂತೆ ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗಕ್ಕೆ ಪ್ರಸ್ತಾಪಿಸಿದೆ.

ಮಾನ್ಯತೆಯನ್ನು ನೀಡುವುದಕ್ಕೆ ಮೊದಲು, ವಿಶ್ವವಿದ್ಯಾನಿಲಯದ ಅನುದಾನಗಳ ಆಯೋಗವು 1963ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಅಧಿನಿಯಮಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡುವಂತೆ ರಾಜ್ಯಸರ್ಕಾರಕ್ಕೆ ಸೂಚಿಸಿತು. ಆದ್ದರಿಂದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಧಿನಿಯಮ, 1963ನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV- 2ಎ, ದಿನಾಂಕ 1987ರ ಏಪ್ರಿಲ್ 4ರಲ್ಲಿ ಪುಟ 8ರಲ್ಲಿ ಸಂ. 289 ಎಂದು ಪ್ರಕಟಿಸಲಾಗಿದೆ).

**VI**

**1988ರ ತಿದ್ದುಪಡಿ ಮಾಡುವ ಅಧಿನಿಯಮ 13.–** ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 40) ರಿಂದ ಪ್ರತ್ಯಾಯೋಜಿಸಲಾದಂತೆ, 8ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ಬರುವ "ಅಪೇಕ್ಷಿಸಿದರೆ" ಎಂಬ ಪದಕ್ಕೆ ಬದಲಾಗಿ ರಾಜ್ಯಪಾಲರ ಅಪೇಕ್ಷೆಯಂತೆ "ಕೋರಿದರೆ" ಎಂಬ ಪದವನ್ನು ಬಳಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದ್ದರಿಂದ, 1987ರ ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧ್ಯಾದೇಶವನ್ನು (1987ರ ಕರ್ನಾಟಕ ಅಧ್ಯಾದೇಶ 9) ಹೊರಡಿಸಲಾಗಿದೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶಕ್ಕೆ ಬದಲಾಗಿ ಮಂಡಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV– 2ಎ, ದಿನಾಂಕ 1988 ಫೆಬ್ರವರಿ 5ರಲ್ಲಿ ಪುಟ 3ರಲ್ಲಿ ಸಂ. 76 ಎಂದು ಪ್ರಕಟಿಸಲಾಗಿದೆ).

## 1963ರ [1][ಕರ್ನಾಟಕ ಅಧಿನಿಯಮ] [1] ಸಂಖ್ಯೆ 22

**(1963ರ ಜೂನ್ ಆರನೇ ದಿನದಂದು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಮೊದಲು ಪ್ರಕಟಿಸಲಾಗಿದೆ.)**

# ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1963

**(1963ರ ಮೇ ಇಪ್ಪತ್ತೈದನೇ ದಿನದಂದು ರಾಷ್ಟ್ರಪತಿಯವರ ಸಮ್ಮತಿ ಪಡೆದಿದೆ)**

**(1976ರ 3, 1985ರ 36, 1986ರ 14, 1987ರ 40, 1988ರ 13 ಈ ಕರ್ನಾಟಕ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)**

**[1][ಕರ್ನಾಟಕ ರಾಜ್ಯ][1] ದಲ್ಲಿ ಕೃಷಿ, ಪಶುಸಂಗೋಪನೆ ಮತ್ತು ಸಂಬಂಧಪಟ್ಟ ವಿಜ್ಞಾನಗಳ ಅಭಿವೃದ್ಧಿಗಾಗಿ [2][ವಿಶ್ವವಿದ್ಯಾನಿಲಯಗಳನ್ನು][2] ಸ್ಥಾಪಿಸುವ ಮತ್ತು ನಿಗಮನಗೊಳಿಸುವ ಒಂದು ಅಧಿನಿಯಮ.**

[1][ಕರ್ನಾಟಕ ರಾಜ್ಯ][1] ದಲ್ಲಿ ಕೃಷಿ, ಪಶುಸಂಗೋಪನೆ ಮತ್ತು ಅದಕ್ಕೆ ಸಂಬಂಧಿಸಿದ ವಿಜ್ಞಾನಗಳ ಅಭಿವೃದ್ಧಿಗಾಗಿ [2][ವಿಶ್ವವಿದ್ಯಾನಿಲಯಗಳ][2]ನ್ನು ಸ್ಥಾಪಿಸುವುದು ಮತ್ತು ಅವುಗಳನ್ನು ನಿಗಮನಗೊಳಿಸುವುದು ಯುಕ್ತವಾಗಿರುವುದರಿಂದ, ಭಾರತ ಗಣರಾಜ್ಯದ ಹದಿನಾಲ್ಕನೇ ವರ್ಷದಲ್ಲಿ [1][ಕರ್ನಾಟಕ][1] ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1986ರ ಅಧಿನಿಯಮ 14ರ ಮೂಲಕ 1.10.1986ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಮೂಲಕ ಪ್ರತಿಯೋಜಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

## ಅಧ್ಯಾಯ -I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1963 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗುತ್ತದೆ.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ರಾಜ್ಯಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1] ದಂದು ಇದು ಜಾರಿಗೆ ಬರತಕ್ಕದ್ದು.

1. ಅಧಿನಿಯಮವು ಅಧಿಸೂಚನೆ ಮೂಲಕ 24.4.1964ರಿಂದ ಜಾರಿಗೆ ಬಂದಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ಶೈಕ್ಷಣಿಕ ಪರಿಷತ್ತು" ಎಂದರೆ, ವಿಶ್ವವಿದ್ಯಾನಿಲಯದ ಶೈಕ್ಷಣಿಕ ಪರಿಷತ್ತು ಎಂದು ಅರ್ಥ;

[1][(1ಎ) "ತಿದ್ದುಪಡಿ ಅಧಿನಿಯಮ" ಎಂದರೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ಅಧಿನಿಯಮ, 1986][1] ಎಂದು ಅರ್ಥ;

1. 1986ರ ಅಧಿನಿಯಮ 14ರ ಮೂಲಕ 1.10.1986ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) "ಕೃಷಿ" ಎಂದರೆ, ಮಣ್ಣು ಮತ್ತು ಜಲ ನಿರ್ವಹಣೆಯ ಮೂಲಭೂತ ಮತ್ತು ಅನ್ವಯಿಕ ವಿಜ್ಞಾನಗಳು, ಎಲ್ಲ ತೋಟದ ಬೆಳೆಗಳ ಉತ್ಪಾದನೆ ಸೇರಿದಂತೆ ಬೆಳೆ ಉತ್ಪಾದನೆ, ಹೈನುಗಾರಿಕೆ ಮತ್ತು ಪಶುವೈದ್ಯ ವಿಜ್ಞಾನವೂ ಸೇರಿದಂತೆ ಪಶುಪಾಲನೆ, ಮೀನುಗಾರಿಕೆ, ಬೇಸಾಯ, ಅರಣ್ಯ ವಿಜ್ಞಾನ, ದೇಶೀ ಅರ್ಥಶಾಸ್ತ್ರ, ಕೃಷಿ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ, ಮಾರುಕಟ್ಟೆ, ಸಂಸ್ಕರಣೆ, ಸಹಕಾರ, ಭೂಮಿಯ ಬಳಕೆ ಮತ್ತು ನಿರ್ವಹಣೆ ಮತ್ತು ಗ್ರಾಮೀಣ ಜನತೆಯ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಎಂದು ಅರ್ಥ;

(3) "ಮಂಡಳಿ" ಎಂದರೆ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಯ ಸದಸ್ಯರ ಮಂಡಳಿ ಎಂದು ಅರ್ಥ;

(4) "ಕಾಲೇಜು" ಎಂದರೆ ವಿಶ್ವವಿದ್ಯಾನಿಲಯದ ಘಟಕ ಕಾಲೇಜು ಎಂದು ಅರ್ಥ;

(5) "ವಿಭಾಗ" ಎಂದರೆ ವಿಶ್ವವಿದ್ಯಾನಿಲಯದಿಂದ ರಚಿತವಾದ ವಿಭಾಗ ಎಂದು ಅರ್ಥ;

(6) "ಗೊತ್ತುಪಡಿಸಲಾದುದು" ಎಂದರೆ ವಿಶ್ವವಿದ್ಯಾನಿಲಯದ ಶಾಸನಗಳ ಮೂಲಕ ಗೊತ್ತುಪಡಿಸಲಾದುದು ಎಂದು ಅರ್ಥ;

(7) "ಶಾಸನಗಳು" ಮತ್ತು "ವಿನಿಯಮನಗಳು" ಎಂದರೆ ಅನುಕ್ರಮವಾಗಿ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ವಿಶ್ವವಿದ್ಯಾನಿಲಯದ ಶಾಸನಗಳು ಮತ್ತು ವಿನಿಯಮನಗಳು ಎಂದು ಅರ್ಥ;

(8) "ವಿಶ್ವವಿದ್ಯಾನಿಲಯದ ವಿದ್ಯಾರ್ಥಿ" ಎಂದರೆ ಕ್ರಮಬದ್ಧವಾಗಿ ಆರಂಭಿಸಿರುವ ಪದವಿ, ಡಿಪ್ಲೊಮಾ ಅಥವಾ ಇತರ ವಿಶಿಷ್ಟ ಶೈಕ್ಷಣಿಕ ವಿಷಯಗಳಲ್ಲಿ ವ್ಯಾಸಂಗ ಕ್ರಮದ ಅಧ್ಯಯನಕ್ಕಾಗಿ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಪಡೆದಿರುವ ಒಬ್ಬ ವ್ಯಕ್ತಿ ಎಂದು ಅರ್ಥ;

(9) "ಅಧ್ಯಾಪಕ" ಎಂದರೆ ಶಿಕ್ಷಣವನ್ನು ನೀಡುವ ಅಥವಾ ಸಂಶೋಧನೆ ಅಥವಾ ವಿಸ್ತರಣಾ ಕಾರ್ಯಕ್ರಮಗಳನ್ನು ನಡೆಸುವ ಮತ್ತು ಮಾರ್ಗದರ್ಶನ ನೀಡುವ ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯವು ನೇಮಕ ಮಾಡಿರುವ ಅಥವಾ ಮನ್ನಣೆ ನೀಡಿರುವ ಒಬ್ಬ ವ್ಯಕ್ತಿ ಎಂದು ಅರ್ಥ ಮತ್ತು ಇದರಲ್ಲಿ ಶಾಸನಗಳ ಮೂಲಕ ಅಧ್ಯಾಪಕ ಎಂದು ಘೋಷಿತನಾಗಿರುವ ವ್ಯಕ್ತಿಯೂ ಒಳಗೊಳ್ಳುತ್ತಾನೆ;

[1][(10) "ವಿಶ್ವವಿದ್ಯಾನಿಲಯ" ಎಂದರೆ 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಮತ್ತು ನಿಗಮಿತವಾದ ಒಂದು ವಿಶ್ವವಿದ್ಯಾನಿಲಯ ಎಂದು ಅರ್ಥ.][1]

1. 1986ರ ಅಧಿನಿಯಮ 14ರ ಮೂಲಕ 1.10.1986ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

## ಅಧ್ಯಾಯ-II

## [1][ವಿಶ್ವವಿದ್ಯಾನಿಲಯಗಳು ][1]

**3. [1][ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ನಿಗಮನ][1].–** (1) [2][ಕರ್ನಾಟಕ ರಾಜ್ಯ][2] ದಲ್ಲಿ ಮತ್ತು ಕರ್ನಾಟಕ ರಾಜ್ಯಕ್ಕಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯವೆಂಬ ಹೆಸರಿನ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸತಕ್ಕದ್ದು. ಅದು ಒಬ್ಬ ಕುಲಪತಿ, ಒಬ್ಬ ಸಹ-ಕುಲಪತಿ, ಒಬ್ಬ ಉಪ-ಕುಲಪತಿ, ವಿದ್ಯಾರ್ಥಿ ಕ್ಷೇಮಪಾಲಕ, ಆಡಳಿತ ಮಂಡಳಿಯ ಸದಸ್ಯರ ಮಂಡಳಿಯನ್ನು ಮತ್ತು ಒಂದು ಶೈಕ್ಷಣಿಕ ಪರಿಷತ್ತನ್ನು ಒಳಗೊಂಡಿರತಕ್ಕದ್ದು.

1. 1986ರ ಅಧಿನಿಯಮ 14ರ ಮೂಲಕ 1.10.1986ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][(1ಎ) (1)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ತಿದ್ದುಪಡಿ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಮತ್ತು ಅಂದಿನಿಂದ,–

(ಎ) (1)ನೇ ಉಪ–ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯವು, ಬೆಳಗಾವಿ, ಬಳ್ಳಾರಿ, ಬೀದರ, ಬಿಜಾಪುರ, ಧಾರವಾಡ, ಗುಲ್ಬರ್ಗ, ರಾಯಚೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದು ಕೊನೆಗೊಳ್ಳತಕ್ಕದ್ದು ಮತ್ತು ಅದನ್ನು ಬೆಂಗಳೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೆಂಗಳೂರು ಎಂದು ಕರೆಯತಕ್ಕದ್ದು; ಮತ್ತು

(ಬಿ) ಧಾರವಾಡದಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ, ಬೆಳಗಾವಿ, ಬಳ್ಳಾರಿ, ಬೀದರ, ಬಿಜಾಪುರ, ಧಾರವಾಡ, ಗುಲ್ಬರ್ಗ, ರಾಯಚೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನೊಳಗೊಂಡ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಎಂದು ಕರೆಯಲಾಗುವ ಒಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸತಕ್ಕದ್ದು. ಅದು ಕುಲಪತಿ, ಒಬ್ಬ ಸಹ–ಕುಲಪತಿ, ಒಬ್ಬ ಉಪ–ಕುಲಪತಿ, ವಿದ್ಯಾರ್ಥಿ ಕ್ಷೇಮ ಪಾಲಕ, ಆಡಳಿತ ಮಂಡಳಿ ಸದಸ್ಯರ ಮಂಡಳಿಯನ್ನು ಮತ್ತು ಒಂದು ಶೈಕ್ಷಣಿಕ ಪರಿಷತ್ತನ್ನು ಒಳಗೊಂಡಿರತಕ್ಕದ್ದು.][1]

1. 1986ರ ಅಧಿನಿಯಮ 14ರ ಮೂಲಕ 1.10.1986ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ವಿಶ್ವವಿದ್ಯಾನಿಲಯವು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(3) ವಿಶ್ವವಿದ್ಯಾನಿಲಯವು, ಯಾವುದೇ ಚರ ಅಥವಾ ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು ಮತ್ತು ಧಾರಣ ಮಾಡಲು, ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ತನ್ನಲ್ಲಿ ನಿಹಿತವಾಗಿರಬಹುದಾದ ಅಥವಾ ತಾನು ಆರ್ಜಿಸಿರಬಹುದಾದ ಯಾವುದೇ ಚರ ಅಥವಾ ಸ್ಥಿರಸ್ವತ್ತನ್ನು ಗೇಣಿಗೆ ಕೊಡಲು, ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾವಣೆ ಮಾಡಲು ಮತ್ತು ಕೇಂದ್ರ ಸರ್ಕಾರದಿಂದ, ರಾಜ್ಯಸರ್ಕಾರದಿಂದ ಅಥವಾ ರಾಜ್ಯಸರ್ಕಾರದಿಂದ ಅನುಮೋದಿತವಾಗಿರುವ ಯಾವುದೇ ನಿಗಮಿತ ನಿಕಾಯದಿಂದ ಹಣವನ್ನು ಸಾಲ ಪಡೆಯಲು ಮತ್ತು ಕರಾರು ಮಾಡಿಕೊಳ್ಳಲು ಹಾಗೂ ಈ ಅಧಿನಿಯಮದ ಉದ್ದೇಶಗಳಿಗಾಗಿ ಅವಶ್ಯವಿರುವ ಇತರ ಎಲ್ಲ ಕಾರ್ಯಗಳನ್ನು ಮಾಡಲು ಸಕ್ಷಮವಾಗಿರತಕ್ಕದ್ದು.

(4) ವಿಶ್ವವಿದ್ಯಾನಿಲಯವು ಹೂಡುವ ಅಥವಾ ಅದರ ವಿರುದ್ಧ ಹೂಡುವ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದ– ಪ್ರತಿವಾದ ಪತ್ರಗಳಿಗೆ ರಿಜಿಸ್ಟ್ರಾರನು ಸಹಿ ಮಾಡಿ, ದೃಢೀಕರಿಸತಕ್ಕದ್ದು ಮತ್ತು ಅಂಥ ದಾವೆಗಳಲ್ಲಿನ ಮತ್ತು ವ್ಯವಹರಣೆಗಳಲ್ಲಿನ ಎಲ್ಲ ಪ್ರೊಸೆಸ್ಸುಗಳನ್ನು ರಿಜಿಸ್ಟ್ರಾರನಿಗೆ ಹೊರಡಿಸತಕ್ಕದ್ದು ಮತ್ತು ಅವನಿಗೆ ಜಾರಿ ಮಾಡತಕ್ಕದ್ದು.

[1][(5) x x x][1]

1. 1986ರ ಅಧಿನಿಯಮ 14ರ ಮೂಲಕ 1.10.1986ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**4. ವಿಶ್ವವಿದ್ಯಾನಿಲಯದ ಉದ್ದೇಶಗಳು.–** ವಿಶ್ವವಿದ್ಯಾನಿಲಯವನ್ನು ಈ ಮುಂದಿನ ಉದ್ದೇಶಗಳಿಗಾಗಿ ಸ್ಥಾಪಿಸಲಾಗಿದೆ ಮತ್ತು ನಿಗಮಿತಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:–

(ಎ) ಅಧ್ಯಯನದ ಬೇರೆ ಬೇರೆ ಶಾಖೆಗಳಲ್ಲಿ, ಅದರಲ್ಲಿ ನಿರ್ದಿಷ್ಟವಾಗಿ ಕೃಷಿ, ತೋಟಗಾರಿಕೆ, ಪಶುವೈದ್ಯ ಮತ್ತು ಪಶುವಿಜ್ಞಾನ, ಮೀನುಗಾರಿಕೆ, ಕೃಷಿ ಇಂಜಿನಿಯರಿಂಗ್, ದೇಶೀ ಅರ್ಥಶಾಸ್ತ್ರ ಮತ್ತು ಇತರ ಸಂಬಂಧಪಟ್ಟ ವಿಜ್ಞಾನಗಳಲ್ಲಿ ಶಿಕ್ಷಣ ನೀಡಲು ಉಪಬಂಧ ಕಲ್ಪಿಸುವುದು;

(ಬಿ) ಕಲಿಕೆ ಮತ್ತು ಸಂಶೋಧನೆಯಲ್ಲಿ ನಿರ್ದಿಷ್ಟವಾಗಿ ಕೃಷಿ ಮತ್ತು ಸಂಬಂಧಪಟ್ಟ ಇತರ ವಿಜ್ಞಾನಗಳಲ್ಲಿ ಮುನ್ನಡೆ ಸಾಧಿಸುವುದು;

(ಸಿ) ರಾಜ್ಯದ ಗ್ರಾಮೀಣ ಜನರಿಗಾಗಿ ಅಂಥ ವಿಜ್ಞಾನಗಳ ವಿಸ್ತರಣಾ ಕಾರ್ಯವನ್ನು ಕೈಗೊಳ್ಳುವುದು; ಮತ್ತು

(ಡಿ) ರಾಜ್ಯಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸ ಬಹುದಾದಂಥ ಇತರ ಉದ್ದೇಶಗಳು.

**5. ವಿಶ್ವವಿದ್ಯಾನಿಲಯಕ್ಕೆ ಪ್ರವೇಶ.–** (1) ವಿಶ್ವವಿದ್ಯಾನಿಲಯವು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಶಾಸನಗಳಿಗೆ ಒಳಪಟ್ಟು, ಎಲ್ಲ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವ ಯಾವುದೂ, ಗೊತ್ತುಪಡಿಸಲಾದುದಕ್ಕಿಂತ ಹೆಚ್ಚಿನ ಸಂಖ್ಯೆಯ ಅಥವಾ ಗೊತ್ತುಪಡಿಲಾದುದಕ್ಕಿಂತ ಕಡಿಮೆ ಶೈಕ್ಷಣಿಕ ಅಥವಾ ಇತರ ವಿದ್ಯಾರ್ಹತೆಗಳಿರುವ ವಿದ್ಯಾರ್ಥಿಗಳಿಗೆ ಯಾವುದೇ ವ್ಯಾಸಂಗ ಕ್ರಮಕ್ಕೆ ಪ್ರವೇಶ ನೀಡುವಂತೆ ವಿಶ್ವವಿದ್ಯಾನಿಲಯವನ್ನು ಅಗತ್ಯಪಡಿಸತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಪರಂತುಕಕ್ಕೊಳಪಟ್ಟು, ವಿಶ್ವವಿದ್ಯಾನಿಲಯವು, ಕಾಲೇಜುಗಳಲ್ಲಿ ಮಹಿಳೆಯರಿಗೆ, ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ, [1][ಕೃಷಿಕರಿಗೆ ಅಥವಾ ಈ ಸಂಬಂಧದಲ್ಲಿ ಗೊತ್ತುಪಡಿಸಲಾದ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿರುವ ಮತ್ತು ರಾಜ್ಯಸರ್ಕಾರವು ಆದೇಶದ ಮೂಲಕ ನಿರ್ದಿರ್ಷ್ಟಪಡಿಸಬಹುದಾದಂಥ ಪ್ರಾಯೋಗಿಕ ಕೃಷಿ ಪರೀಕ್ಷೆಗಳಲ್ಲಿ ತೇರ್ಗಡೆಯಾದ ಕೃಷಿಕರ ಮಕ್ಕಳಿಗೆ, ಸ್ವಾತಂತ್ರ್ಯ ಹೋರಾಟಗಾರರ ಮಕ್ಕಳಿಗೆ ಮತ್ತು ಅವರ ಆಶ್ರಿತರಿಗೆ, ರಕ್ಷಣಾ ಸಿಬ್ಬಂದಿಯ ಮತ್ತು ಮಾಜಿ ಸೈನಿಕರ ಮಕ್ಕಳಿಗೆ ಮತ್ತು ಆಶ್ರಿತರಿಗೆ][1] ಮತ್ತು ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ನಾಗರಿಕರ ವರ್ಗಗಳೆಂದು ಘೋಷಿಸಬಹುದಾದಂಥ ಮಕ್ಕಳಿಗೆ ಸ್ಥಾನಗಳನ್ನು ಮೀಸಲಿಡತಕ್ಕದ್ದೆಂದು ರಾಜ್ಯ ಸರ್ಕಾರವು ನಿರ್ದೇಶಿಸಬಹುದು ಮತ್ತು ಅಂಥ ನಿರ್ದೇಶನಗಳನ್ನು ನೀಡಿರುವಲ್ಲಿ, ವಿಶ್ವವಿದ್ಯಾನಿಲಯವು ತದನುಸಾರವಾಗಿ ಮೀಸಲು ಇಡತಕ್ಕದ್ದು.

1. 1976ರ ಅಧಿನಿಯಮ 3ರ ಮೂಲಕ 6.09.1975ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**ವಿವರಣೆ.–** (1) ಈ (1)ನೇ ಉಪ–ಪ್ರಕರಣದ ಉದ್ದೇಶಗಳಿಗಾಗಿ, "ಕೃಷಿಕ" ಎಂದರೆ, ಮಾಲೀಕನಾಗಿ ಅಥವಾ ಗೇಣಿದಾರನಾಗಿ ಭೂಮಿಯನ್ನು ಧಾರಣ ಮಾಡಿರುವ ಮತ್ತು ಯಾರ ವರಮಾನದ ಪ್ರಮುಖ ಮೂಲವು, ಜಮೀನಿನ ಸ್ವತಃ ಸಾಗುವಳಿಯಿಂದ ಬರುವುದೋ ಆ ವ್ಯಕ್ತಿ ಎಂದು ಅರ್ಥ ಮತ್ತು ಇದರಲ್ಲಿ ಕೃಷಿ ಜಮೀನುಗಳಲ್ಲಿ ದೈಹಿಕ ದುಡಿಮೆಯು ಪ್ರಮುಖ ಜೀವನೋಪಾಯವಾಗಿರುವ ವ್ಯಕ್ತಿಯೂ ಒಳಗೊಳ್ಳುತ್ತಾನೆ.

(2) "ಸ್ವಾತಂತ್ರ್ಯ ಹೋರಾಟಗಾರ" ಎಂದರೆ ರಾಜ್ಯ ಸರ್ಕಾರವು, ಹಾಗೆಂದು ಕಾಲಕಾಲಕ್ಕೆ ಘೋಷಣೆ ಮಾಡಿದ ವರ್ಗದ ವ್ಯಕ್ತಿ ಎಂದು ಅರ್ಥ.][1]

1. 1976ರ ಅಧಿನಿಯಮ 3ರ ಮೂಲಕ 6.9.1975ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**6. ವಿಶ್ವವಿದ್ಯಾನಿಲಯದ ಅಧಿಕಾರಗಳು.–** ವಿಶ್ವವಿದ್ಯಾನಿಲಯವು, ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(1) ವಿಶ್ವವಿದ್ಯಾನಿಲಯವು ಸೂಕ್ತವೆಂದು ಭಾವಿಸಬಹುದಾದಂಥ, ಕೃಷಿ, ತೋಟಗಾರಿಕೆ, ಪಶುವೈದ್ಯ ಮತ್ತು ಪಶುವಿಜ್ಞಾನ, ಹೈನುಗಾರಿಕೆ, ಮೀನುಗಾರಿಕೆ, ಕೃಷಿ ಇಂಜಿನಿಯರಿಂಗ್, ದೇಶೀ ಅರ್ಥಶಾಸ್ತ್ರ ಮತ್ತು ಅಂಥ ಇತರ ಅಧ್ಯಯನ ಶಾಖೆಗಳಲ್ಲಿ ಶಿಕ್ಷಣಕ್ಕೆ ವ್ಯವಸ್ಥೆ ಮಾಡುವುದು;

(2) ವಿಸ್ತರಣಾ ಶಿಕ್ಷಣ ಕಾರ್ಯಕ್ರಮದ ಮೂಲಕ ಸಂಶೋಧನೆಗೆ ಮತ್ತು ಸಂಶೋಧನೆಯ ಆವಿಷ್ಕಾರಗಳ ಮತ್ತು ತಾಂತ್ರಿಕ ಮಾಹಿತಿಯ ಪ್ರಸಾರಕ್ಕೆ ವ್ಯವಸ್ಥೆ ಮಾಡುವುದು;

(3) ಪದವಿಗಳು, ಡಿಪ್ಲೋಮಾಗಳು ಮತ್ತು ಇತರ ವಿಶಿಷ್ಟ ಶೈಕ್ಷಣಿಕ ವಿಷಯಗಳನ್ನು ಆರಂಭಿಸುವುದು;

(4) ವ್ಯಾಸಂಗ ಕ್ರಮಗಳನ್ನು ಆರಂಭಿಸುವುದು ಮತ್ತು ಯಾರು,–

ಎ) ಗೊತ್ತುಪಡಿಸಿದ ವ್ಯಾಸಂಗ ಕ್ರಮಗಳನ್ನು ಅಭ್ಯಸಿಸಿರುವರೋ; ಅಥವಾ

ಬಿ) ಗೊತ್ತುಪಡಿಸಬಹುದಾದಂತೆ, ಈ ವಿಶ್ವವಿದ್ಯಾನಿಲಯದಲ್ಲಿ ಅಥವಾ ವಿಶ್ವವಿದ್ಯಾನಿಲಯವು ಈ ಸಂಬಂಧದಲ್ಲಿ ಮನ್ನಣೆ ನೀಡಿರುವ ಸಂಸ್ಥೆಯಲ್ಲಿ ಸಂಶೋಧನೆಯನ್ನು ನಡೆಸಿರುವರೋ

– ಆ ವ್ಯಕ್ತಿಗಳಿಗೆ ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವಿಗಳನ್ನು, ಡಿಪ್ಲೋಮಾಗಳನ್ನು ಮತ್ತು ಇತರ ವಿಶಿಷ್ಟ ಶೈಕ್ಷಣಿಕ ಪದವಿಗಳನ್ನು ಪ್ರದಾನ ಮಾಡುವುದು;

(5) ಗೊತ್ತುಪಡಿಸಬಹುದಾದಂತೆ ಗೌರವ ಪದವಿಗಳನ್ನು ಅಥವಾ ಇತರ ವಿಶಿಷ್ಟ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(6) ವಿಶ್ವವಿದ್ಯಾನಿಲಯದ ನಿಯತ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಸೇರಿಲ್ಲದ ಕ್ಷೇತ್ರಕಾರ್ಯಕರ್ತರಿಗೆ, ಗ್ರಾಮ ಮುಖಂಡರಿಗೆ ಮತ್ತು ಇತರ ವ್ಯಕ್ತಿಗಳಿಗೆ ಗೊತ್ತುಪಡಿಸಬಹುದಾದಂಥ ಉಪನ್ಯಾಸಗಳಿಗೆ ಮತ್ತು ಶಿಕ್ಷಣಗಳಿಗೆ ವ್ಯವಸ್ಥೆ ಮಾಡುವುದು ಮತ್ತು ಅವರಿಗೆ ಪ್ರಮಾಣಪತ್ರಗಳನ್ನು ನೀಡುವುದು;

(7) ವಿಶ್ವವಿದ್ಯಾನಿಲಯವು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾನಿಲಯಗಳೊಂದಿಗೆ ಮತ್ತು ಪ್ರಾಧಿಕಾರಗಳೊಂದಿಗೆ ಸಹಕರಿಸುವುದು;

(8) ಕೃಷಿ, ಮೀನುಗಾರಿಕೆ, ಹೈನುಗಾರಿಕೆ, ಪಶುವೈದ್ಯ ಮತ್ತು ಸಂಬಂಧಿತ ವಿಜ್ಞಾನಗಳ ಕಾಲೇಜುಗಳನ್ನು ಮತ್ತು ಅವುಗಳಿಗಾಗಿ ವಿದ್ಯಾರ್ಥಿ ನಿಲಯಗಳನ್ನು [1][ಸ್ಥಾಪಿಸುವುದು ಮತ್ತು ನಿರ್ವಹಿಸುವುದು][1];

1. 1985ರ ಅಧಿನಿಯಮ 36ರ ಮೂಲಕ ದಿನಾಂಕ 24.04.1964ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(9) ಬೋಧನೆಗಾಗಿ, ಸಂಶೋಧನೆಗಾಗಿ ಮತ್ತು ವಿಸ್ತರಣಾ ಶಿಕ್ಷಣಕ್ಕಾಗಿ ಪ್ರಯೋಗ ಶಾಲೆಗಳನ್ನು, ಗ್ರಂಥಾಲಯಗಳನ್ನು, ಸಂಶೋಧನಾ ಕೇಂದ್ರಗಳನ್ನು ಮತ್ತು ಸಂಸ್ಥೆಗಳನ್ನು ಮತ್ತು ವಸ್ತು ಸಂಗ್ರಹಾಲಯಗಳನ್ನು ನಿರ್ವಹಿಸುವುದು;

(10) ವಿಶ್ವವಿದ್ಯಾನಿಲಯಕ್ಕೆ ಅಗತ್ಯವಾದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಕ ಮಾಡುವುದು;

(11) ಆಡಳಿತಾತ್ಮಕ, ಲಿಪಿಕ ಮತ್ತು ಇತರ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಕ ಮಾಡುವುದು;

(12) ವಿಶ್ವವಿದ್ಯಾನಿಲಯಗಳ ಶಾಸನಗಳ ಅನುಸಾರ ಶಿಷ್ಯವೇತನಗಳನ್ನು, ವಿದ್ಯಾರ್ಥಿ ವೇತನಗಳನ್ನು ಮತ್ತು ಬಹುಮಾನಗಳನ್ನು ಸ್ಥಾಪಿಸುವುದು ಮತ್ತು ನೀಡುವುದು;

(13) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ವಸತಿ ಸೌಕರ್ಯಗಳನ್ನು ಒದಗಿಸುವುದು ಮತ್ತು ನಿರ್ವಹಿಸುವುದು;

(14) ಗೊತ್ತುಪಡಿಸಬಹುದಾದಂಥ ಶುಲ್ಕಗಳನ್ನು ಮತ್ತು ಇತರ ಚಾರ್ಜುಗಳನ್ನು ನಿಗದಿಪಡಿಸುವುದು, ಕೇಳುವುದು ಮತ್ತು ಸ್ವೀಕರಿಸುವುದು;

(15) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ವಾಸಸ್ಥಳದ, ನಡತೆಯ ಮತ್ತು ಶಿಸ್ತಿನ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವುದು, ಮತ್ತು ಅವರ ಆರೋಗ್ಯವನ್ನು ಮತ್ತು ಕಲ್ಯಾಣವನ್ನು ವೃದ್ಧಿಗೊಳಿಸಲು ವ್ಯವಸ್ಥೆ ಮಾಡುವುದು;

(16) ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅವಶ್ಯವೆನಿಸಬಹುದಾದಂತೆ ಮೇಲೆ ಹೇಳಿದ ಅಧಿಕಾರಗಳಿಗೆ ಆನುಷಂಗಿಕವಾಗಿರಲಿ ಅಥವಾ ಇಲ್ಲದಿರಲಿ, ಅಂಥ ಎಲ್ಲ ಕೆಲಸಗಳನ್ನು ಮತ್ತು ಕಾರ್ಯಗಳನ್ನು ಮಾಡುವುದು.

[1][**6ಎ. ಸಂಯೋಜನೆ ಅಥವಾ ವಿಶೇಷ ಸವಲತ್ತು, ಇತ್ಯಾದಿಗಳಿಗೆ ಅನುಮತಿ.–** 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರದ ಶಿಕ್ಷಣವನ್ನು ನೀಡುತ್ತಿರುವ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯದೊಳಗಿರುವ ಯಾವುದೇ ಶಿಕ್ಷಣ ಸಂಸ್ಥೆಯು, ಯಾವ ರೀತಿಯಲ್ಲಿಯೂ, ಕರ್ನಾಟಕ ರಾಜ್ಯದ ಹೊರಗಿನ ಯಾವುದೇ ಇತರ ವಿಶ್ವವಿದ್ಯಾನಿಲಯದೊಂದಿಗೆ ಸಹವರ್ತಿಸತಕ್ಕದ್ದಲ್ಲ ಅಥವಾ ಯಾವುದೇ ವಿಶೇಷ ಸವಲತ್ತುಗಳನ್ನು ಪಡೆಯತಕ್ಕದ್ದಲ್ಲ ಮತ್ತು ಸಂಯೋಜನೆಗೊಳ್ಳತಕ್ಕದ್ದಲ್ಲ. 1985ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಯಾವುದೇ ಅಂಥ ಇತರ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದೊಳಗಿರುವ ಯಾವುದೇ ಅಂಥ ಸಂಸ್ಥೆಗೆ ಸಂಯೋಜನೆಯನ್ನು ಮಂಜೂರು ಮಾಡಿದ್ದರೆ, ಅದನ್ನು ಅಂಥ ಪ್ರಾರಂಭದ ದಿನಾಂಕದಿಂದ ಹಿಂತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.][1]

1. 1985ರ ಅಧಿನಿಯಮ 36ರ ಮೂಲಕ ದಿನಾಂಕ 10.06.1985ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**7. ಕೆಲವು ಕಾಲೇಜುಗಳು ಮತ್ತು ಸಂಸ್ಥೆಗಳನ್ನು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡುವುದು.–** (1) ಕರ್ನಾಟಕ ವಿಶ್ವವಿದ್ಯಾನಿಲಯ ಅಧಿನಿಯಮ, 1949ರ ಮತ್ತು ಮೈಸೂರು ವಿಶ್ವವಿದ್ಯಾನಿಲಯ ಅಧಿನಿಯಮ, 1956ರ ಅಥವಾ ಅದರ ಅಡಿಯಲ್ಲಿ ರಚಿಸಲಾದ ಶಾಸನಗಳಲ್ಲಿ, ಅಧ್ಯಾದೇಶಗಳಲ್ಲಿ, ವಿನಿಯಮನಗಳಲ್ಲಿ ಮತ್ತು ಆದೇಶಗಳಲ್ಲಿ ಏನೇ ಒಳಗೊಂಡಿದ್ದರೂ, ಕೃಷಿ ಕಾಲೇಜು, ಧಾರವಾಡ, ಕೃಷಿ ಕಾಲೇಜು, ಹೆಬ್ಬಾಳ ಮತ್ತು ಮೈಸೂರು ಪಶುವೈದ್ಯ ಕಾಲೇಜು, ಹೆಬ್ಬಾಳ– ಇವುಗಳನ್ನು ರಾಜ್ಯಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ, (ಈ ಪ್ರಕರಣದಲ್ಲಿ ಇನ್ನುಮುಂದೆ ಗೊತ್ತುಪಡಿಸಿದ ದಿನವೆಂದು ಉಲ್ಲೇಖಿಸಲಾಗಿದೆ) ಸಂದರ್ಭಾನುಸಾರ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಅಥವಾ ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಯನ್ನು ಹಿಂತೆಗೆದುಕೊಳ್ಳತಕ್ಕದ್ದು ಮತ್ತು ಅವುಗಳನ್ನು ಘಟಕ ಕಾಲೇಜುಗಳಾಗಿ ವಿಶ್ವವಿದ್ಯಾನಿಲಯವು ನಿರ್ವಹಿಸತಕ್ಕದ್ದು.

(2) (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾಲೇಜುಗಳ ನಿಯಂತ್ರಣ ಮತ್ತು ನಿರ್ವಹಣೆಯನ್ನು, ಗೊತ್ತುಪಡಿಸಲಾದ ದಿನದಿಂದ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸತಕ್ಕದ್ದು ಮತ್ತು ಅದಕ್ಕೆ ಸಂಬಂಧಿಸಿದ ರಾಜ್ಯ ಸರ್ಕಾರದ ಎಲ್ಲ ಸ್ವತ್ತುಗಳನ್ನು ಮತ್ತು ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ಮತ್ತು ಬಾಧ್ಯತೆಗಳನ್ನು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸತಕ್ಕದ್ದು, ನಿಹಿತಗೊಳಿಸತಕ್ಕದ್ದು ಅಥವಾ ಅವು ಪ್ರಾಪ್ತವಾಗತಕ್ಕದ್ದು.

(3) ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಲಾದ ಶಾಸನಗಳಲ್ಲಿ ಮತ್ತು ವಿನಿಯಮನಗಳಲ್ಲಿ ಏನೇ ಒಳಗೊಂಡಿದ್ದರೂ, ಕರ್ನಾಟಕ ವಿಶ್ವವಿದ್ಯಾನಿಲಯದ ಅಥವಾ ಮೈಸೂರು ವಿಶ್ವವಿದ್ಯಾನಿಲಯದ ಯಾವುದೇ ಪರೀಕ್ಷೆಗಾಗಿ ಅಧ್ಯಯನ ಮಾಡುತ್ತಿದ್ದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾಲೇಜಿನ ಯಾವನೇ ವಿದ್ಯಾರ್ಥಿಯು, ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲು ಅವನು ವ್ಯಾಸಂಗ ಕ್ರಮವನ್ನು ಮುಗಿಸಲು ಅನುಮತಿಸತಕ್ಕದ್ದು ಮತ್ತು ವಿಶ್ವವಿದ್ಯಾನಿಲಯವು, ಸಂದರ್ಭಾನುಸಾರ ಕರ್ನಾಟಕ ವಿಶ್ವವಿದ್ಯಾನಿಲಯದ ಅಥವಾ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಯನದ ಪಠ್ಯಗಳ ಅನುಸಾರ ಗೊತ್ತುಪಡಿಸಬಹುದಾದಂಥ ಅವಧಿಗೆ ಅಂಥ ವಿದ್ಯಾರ್ಥಿಗಳಿಗಾಗಿ ಪರೀಕ್ಷೆಗಳನ್ನು ನಡೆಸಲು ವ್ಯವಸ್ಥೆ ಮಾಡತಕ್ಕದ್ದು.

(4) ರಾಜ್ಯಸರ್ಕಾರದ ಕೃಷಿ ಇಲಾಖೆಯ, ಪಶು ಸಂಗೋಪನಾ ಇಲಾಖೆಯ ಮತ್ತು ಮೀನುಗಾರಿಕೆ ಇಲಾಖೆಯ ಅಂಥ ಸಂಶೋಧನೆ ಮತ್ತು ಶೈಕ್ಷಣಿಕ ಸಂಸ್ಥೆಗಳ ನಿಯಂತ್ರಣವನ್ನು ಮತ್ತು ನಿರ್ವಹಣೆಯನ್ನು ರಾಜ್ಯಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸತಕ್ಕದ್ದು ಮತ್ತು ಆ ನಂತರ ಅಂಥ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದ ಎಲ್ಲ ಆಸ್ತಿಗಳು ಮತ್ತು ಸ್ವತ್ತುಗಳು ಮತ್ತು ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳು, ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಯಾಗತಕ್ಕದ್ದು, ಅದರಲ್ಲಿ ನಿಹಿತಗೊಳ್ಳತಕ್ಕದ್ದು ಅಥವಾ ಅದಕ್ಕೆ ಪ್ರಾಪ್ತವಾಗತಕ್ಕದ್ದು.

(5) ರಾಜ್ಯಸರ್ಕಾರವು ಮಂಡಳಿಯೊಂದಿಗೆ ಸಮಾಲೋಚಿಸಿ ನಿರ್ಧರಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ, (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಾಲೇಜುಗಳಲ್ಲಿ ಅಥವಾ (4)ನೇ ಉಪ-ಪ್ರಕರಣದ ಅಡಿಯಲ್ಲಿನ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅಥವಾ ಗೊತ್ತುಪಡಿಸಿದ ದಿನದ ಅಥವಾ ದಿನಾಂಕದ ನಿಕಟಪೂರ್ವದಲ್ಲಿ (4)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಸಂಸ್ಥೆಗಳಲ್ಲಿ ನಿಯೋಜಿತನಾದ ಯಾವನೇ ವ್ಯಕ್ತಿಯು, ಸಂದರ್ಭಾನುಸಾರ ಗೊತ್ತುಪಡಿಸಿದ ದಿನದಿಂದ ಅಥವಾ ನಿರ್ದಿಷ್ಟಪಡಿಸಿದ ದಿನಾಂಕದಿಂದ ವಿಶ್ವವಿದ್ಯಾನಿಲಯದ ನೌಕರನಾಗತಕ್ಕದ್ದು:

ಪರಂತು, ರಾಜ್ಯಗಳ ಪುನರ್ ವಿಂಗಡಣಾ ಅಧಿನಿಯಮ, 1956ರ 115ನೇ ಪ್ರಕರಣದ ಅಡಿಯಲ್ಲಿ [1][ಕರ್ನಾಟಕ ರಾಜ್ಯ][1] ದ ವ್ಯವಹಾರಗಳ ಸಂಬಂಧದಲ್ಲಿ ಸೇವೆ ಸಲ್ಲಿಸಲು ಹಂಚಿಕೆ ಮಾಡಿದ ಅಥವಾ ಹಂಚಿಕೆ ಮಾಡಿರುವುದಾಗಿ ಭಾವಿಸುವಂಥ ಯಾವನೇ ವ್ಯಕ್ತಿಯನ್ನು ಅಂಥ ವ್ಯಕ್ತಿಯ ಒಪ್ಪಿಗೆ ಇದ್ದ ಹೊರತು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡತಕ್ಕದ್ದಲ್ಲ.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][7ಎ. **ಕೆಲವು ಕಾಲೇಜುಗಳನ್ನು ಮತ್ತು ಸಂಸ್ಥೆಗಳನ್ನು ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡುವುದು.**– (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಅಧಿನಿಯಮವು ಪ್ರಾರಂಭವಾಗುವ ದಿನಾಂಕದಂದು ಮತ್ತು ಆ ದಿನಾಂಕದಿಂದ,–

(ಎ) ತಿದ್ದುಪಡಿ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ 3ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಶ್ವವಿದ್ಯಾನಿಲಯದ ಸ್ವಾಮ್ಯದಲ್ಲಿರುವ ಮತ್ತು ಅದು ನಿರ್ವಹಿಸುತ್ತಿರುವ ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಯೊಳಗಿರುವ ಎಲ್ಲ ಕಾಲೇಜುಗಳು, ಅದಕ್ಕೆ ಸಂಬಂಧಿಸಿದ ವಿದ್ಯಾರ್ಥಿನಿಲಯಗಳು, ಪೀಠೋಪಕರಣ, ಗ್ರಂಥಾಲಯಗಳು, ಪುಸ್ತಕಗಳು, ಪ್ರಯೋಗಶಾಲೆಗಳು, ಉಗ್ರಾಣಗಳು, ಉಪಕರಣಗಳು, ಸಲಕರಣೆಗಳು, ಪರಿಕರಗಳು ಮತ್ತು ಸಾಧನಸಾಮಗ್ರಿಗಳೊಂದಿಗೆ ಇತರ ಕಟ್ಟಡಗಳು, ಮತ್ತು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ

ಒಳಗೊಂಡಂತೆ ಎಲ್ಲ ಇತರ ಆಸ್ತಿಗಳು ಮತ್ತು ಸಂಶೋಧನೆ ಮತ್ತು ಇತರ ಸಂಸ್ಥೆಗಳನ್ನು, ಎಲ್ಲ ಸ್ವತ್ತುಗಳು, ಆಸ್ತಿಗಳು, ಹೊಣೆಗಾರಿಕೆ ಮತ್ತು ಬಾಧ್ಯತೆಗಳ ಸಹಿತ ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸತಕ್ಕದ್ದು ಮತ್ತು ಅದರಲ್ಲಿ ನಿಹಿತಗೊಳಿಸತಕ್ಕದ್ದು:

ಪರಂತು, ರಾಜ್ಯಸರ್ಕಾರವು, ಧಾರವಾಡದಲ್ಲಿ ವಿಶ್ವವಿದ್ಯಾಲಯ ಆವರಣವನ್ನು ಅಭಿವೃದ್ಧಿಗೊಳಿಸಲು ಅದು ಸೂಕ್ತವೆಂದು ಭಾವಿಸುವಂಥ ಹೆಚ್ಚುವರಿ ಅಭಿವೃದ್ಧಿ ಅನುದಾನವನ್ನು ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ಮಂಜೂರು ಮಾಡಬಹುದು;

(ಬಿ) (i) ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲಾದ ಕಾಲೇಜುಗಳಲ್ಲಿ ತಿದ್ದುಪಡಿ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು, 3ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ವಿಶ್ವವಿದ್ಯಾನಿಲಯದ ಯಾವುದೇ ಪರೀಕ್ಷೆಗಾಗಿ ವ್ಯಾಸಂಗ ಮಾಡುತ್ತಿದ್ದ ಯಾವನೇ ವಿದ್ಯಾರ್ಥಿಗೆ ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದಲ್ಲಿ ಅವನ ವ್ಯಾಸಂಗವನ್ನು ಪೂರ್ಣಗೊಳಿಸಲು ಅನುಮತಿಸತಕ್ಕದ್ದು. ಆ ವಿಶ್ವವಿದ್ಯಾನಿಲಯವು ತನ್ನ ಪಠ್ಯದ ಅನುಸಾರ, ಗೊತ್ತುಪಡಿಸಬಹುದಾದಂಥ ಅವಧಿಗೆ, ಅಂಥ ವಿದ್ಯಾರ್ಥಿಗಳಿಗಾಗಿ ಪರೀಕ್ಷೆಗಳನ್ನು ನಡೆಸಲು ವ್ಯವಸ್ಥೆಗಳನ್ನು ಮಾಡತಕ್ಕದ್ದು;

(ii) 3ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ವಿಶ್ವವಿದ್ಯಾನಿಲಯವು, ತಿದ್ದುಪಡಿ ಅಧಿನಿಯಮವು ಪ್ರಾರಂಭವಾಗುವುದಕ್ಕೂ ಮೊದಲು, ಯಾವುದೇ ಪರೀಕ್ಷೆ ನಡೆಸಿದ್ದು ಅದರ ಫಲಿತಾಂಶಗಳನ್ನು ಘೋಷಿಸದೇ ಇದ್ದರೆ, ಅಥವಾ ವ್ಯಾಸಂಗ ಕ್ರಮದ ಅಗತ್ಯತೆಗಳು ಪೂರ್ಣಗೊಂಡಿದ್ದರೂ ಯಾವುದೇ ಅಂಥ ಪರೀಕ್ಷೆಯ ಫಲಿತಾಂಶಗಳನ್ನು ಘೋಷಿಸದೇ ಇದ್ದರೆ, ಆಗ ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯವು ಫಲಿತಾಂಶಗಳನ್ನು ಘೋಷಿಸಬಹುದು ಮತ್ತು ಪದವಿಗಳನ್ನು ಪ್ರದಾನ ಮಾಡಬಹುದು;

(ಸಿ) 3ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ವಿಶ್ವವಿದ್ಯಾನಿಲಯದ ಮತ್ತು ತಿದ್ದುಪಡಿ ಅಧಿನಿಯಮವು ಪ್ರಾರಂಭವಾಗುವ ದಿನಾಂಕಕ್ಕೆ ಮೊದಲು, ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯೊಳಗಿರುವ ಅಥವಾ ಅದಕ್ಕೆ ಸೇರಿದ ಯಾವುದೇ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬ ಅಧ್ಯಾಪಕನನ್ನು ಮತ್ತು ಇತರ ನೌಕರನನ್ನು ಅಂಥ ದಿನಾಂಕದಿಂದ ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಯುಕ್ತ ವೃಂದಕ್ಕೆ ಅಥವಾ ಹುದ್ದೆಗಳ ವರ್ಗಕ್ಕೆ ವರ್ಗಾಯಿಸತಕ್ಕದ್ದು:

ಪರಂತು, ಹಾಗೆ ವರ್ಗಾವಣೆಯಾದ ಯಾರೇ ಅಧ್ಯಾಪಕನು ಅಥವಾ ಇತರ ನೌಕರನು, ತೊಂಬತ್ತು ದಿನಗಳೊಳಗಾಗಿ ಅಥವಾ ರಾಜ್ಯಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಆರು ತಿಂಗಳಿಗಿಂತ ಹೆಚ್ಚಿಲ್ಲದ ಮತ್ತಷ್ಟು ಅವಧಿಯೊಳಗಾಗಿ, ತಿದ್ದುಪಡಿ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಕೋರಿ ರಾಜ್ಯಸರ್ಕಾರಕ್ಕೆ ಅರ್ಜಿ ಸಲ್ಲಿಸಬಹುದು. ಅದರ ಮೇಲಿನ ರಾಜ್ಯಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು;

(ಡಿ) ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಯಾಗಬಯಸುವ ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಯಾವನೇ ಅಧ್ಯಾಪಕನು ಅಥವಾ ಇತರ ನೌಕರನು ತಿದ್ದುಪಡಿ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ತೊಂಬತ್ತು ದಿನಗಳ ಒಳಗೆ ಅಥವಾ ರಾಜ್ಯಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ಅವಧಿಯೊಳಗೆ ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಕೋರಿ ರಾಜ್ಯಸರ್ಕಾರಕ್ಕೆ ಅರ್ಜಿ ಸಲ್ಲಿಸಬಹುದು ಮತ್ತು ಅದರ ಮೇಲಿನ ರಾಜ್ಯಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು;

(ಇ) ರಾಜ್ಯಸರ್ಕಾರವು, ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಮತ್ತು ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಉಪ-ಕುಲಪತಿಗಳೊಂದಿಗೆ ಸಮಾಲೋಚಿಸಿ, ಈ ವಿಶ್ವವಿದ್ಯಾನಿಲಯಗಳಲ್ಲಿ ಹೆಚ್ಚಿನ ಅಧ್ಯಾಪಕರು, ಇತರ ನೌಕರರು ಯಾರಾದರೂ ಇದ್ದರೆ, ಹಾಗೆ ಹೆಚ್ಚಾಗಿರುವ ಸಿಬ್ಬಂದಿಯನ್ನು ಅದು ಯುಕ್ತವೆಂದು ಪರಿಗಣಿಸಬಹುದಾದಂಥ ಸೂತ್ರಗಳನ್ನು ಮತ್ತು ಕಾರ್ಯವಿಧಾನವನ್ನು ಅನುಸರಿಸಿದ ನಂತರ, ಸಂದರ್ಭಾನುಸಾರ, ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ಅಥವಾ ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಬಹುದು.][1]

1. 1986ರ ಅಧಿನಿಯಮ 14ರ ಮೂಲಕ 1.10.1986ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**8. ಪರಿಶೀಲನೆ ಮತ್ತು ನಿಯಂತ್ರಣ.**- (1) ಕುಲಪತಿಯು, ವಿಶ್ವವಿದ್ಯಾನಿಲಯದ, ಅದರ ಕಟ್ಟಡಗಳ, ಪ್ರಯೋಗಶಾಲೆಗಳ, ಗ್ರಂಥಾಲಯಗಳ, ವಸ್ತುಸಂಗ್ರಹಾಲಯಗಳ, ವಸತಿ ನಿಲಯಗಳ, ಕಾರ್ಯಾಗಾರಗಳ ಮತ್ತು ಸಾಧನ ಸಾಮಗ್ರಿಗಳ ಮತ್ತು ವಿಶ್ವವಿದ್ಯಾನಿಲಯವು ನಿರ್ವಹಿಸುವ, ಆಡಳಿತ ನಡೆಸುವ, ಮನ್ನಣೆ ಕೊಟ್ಟಿರುವ ಅಥವಾ ಅನುಮೋದಿಸಿರುವ ಯಾವುದೇ ಸಂಸ್ಥೆಯ ಮತ್ತು ವಿಶ್ವವಿದ್ಯಾನಿಲಯವು ನಡೆಸಿದ ಅಥವಾ ನಿರ್ವಹಿಸಿದ ಪರೀಕ್ಷೆಗಳ, ಬೋಧನೆಗಳ ಮತ್ತು ಇತರ ಕೆಲಸಗಳ ಪರಿಶೀಲನೆಯನ್ನು ಮಾಡಿಸುವಂತೆ ರಾಜ್ಯಸರ್ಕಾರವು [2][ಕೋರಿದರೆ][2] ಮತ್ತು ತಾನಾಗಿಯೇ ತಾನು ನಿರ್ದೇಶಿಸಬಹುದಾದಂಥ ವ್ಯಕ್ತಿಯಿಂದ ಅಥವಾ ವ್ಯಕ್ತಿಗಳಿಂದ ಹಾಗೆ ಮಾಡಿಸತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದ ಬಗ್ಗೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅದೇ ರೀತಿಯಲ್ಲಿ ಪರಿಶೀಲನೆಯನ್ನು ಅಥವಾ ವಿಚಾರಣೆಯನ್ನು ಮಾಡಿಸತಕ್ಕದ್ದು.

1. 1987ರ ಅಧಿನಿಯಮ 40ರ ಮೂಲಕ 8ನೇ ಪ್ರಕರಣವನ್ನು 31.12.1987 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1988ರ ಅಧಿನಿಯಮ 13ರ ಮೂಲಕ 31.12.1987 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಪರಿಶೀಲನೆಯನ್ನು ಅಥವಾ ವಿಚಾರಣೆಯನ್ನು ಮಾಡಲು ನಿರ್ದೇಶಿತರಾದ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ, ಆ ಉದ್ದೇಶಕ್ಕಾಗಿ ಸಂಬಂಧಪಟ್ಟ ಸಂಸ್ಥೆಗಳಿಗೆ ಮತ್ತು ಆವರಣಗಳಿಗೆ ಪ್ರವೇಶಾವಕಾಶವಿರತಕ್ಕದ್ದು ಮತ್ತು ಅಗತ್ಯವಾಗಬಹುದಾದಂಥ ಲೆಕ್ಕಪತ್ರಗಳನ್ನು ಅಥವಾ ಇತರ ದಾಖಲೆಗಳನ್ನು ನೋಡುವ ಅವಕಾಶವಿರತಕ್ಕದ್ದು.

(3) ಸದರಿ ವ್ಯಕ್ತಿಯು ಅಥವಾ ವ್ಯಕ್ತಿಗಳು, ಪರಿಶೀಲನೆಯ ಅಥವಾ ವಿಚಾರಣೆಯ ಫಲಿತಾಂಶದ ವರದಿಯನ್ನು ಕುಲಪತಿಗೆ ಸಲ್ಲಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ರಾಜ್ಯಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(4) ರಾಜ್ಯ ಸರ್ಕಾರವು, ಆ ವರದಿಯಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ಅಭಿಪ್ರಾಯೋಕ್ತಿಗಳನ್ನು ಸೂಚಿಸಿ ಉಪ-ಕುಲಪತಿಗೆ ಬರೆಯಬಹುದು ಮತ್ತು ಉಪ-ಕುಲಪತಿಯು ಅವುಗಳನ್ನು ಅವಶ್ಯ ಕ್ರಮ ಕೈಗೊಳ್ಳುವುದಕ್ಕಾಗಿ ಮಂಡಲಿಗೆ ತಿಳಿಸತಕ್ಕದ್ದು.

(5) ಮಂಡಳಿಯು ತಾನು ಕೈಕೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವಂಥ ಕ್ರಮ ಯಾವುದಾದರೂ ಇದ್ದರೆ, ಅದನ್ನು ಉಪ-ಕುಲಪತಿಯ ಮೂಲಕ ಸರ್ಕಾರಕ್ಕೆ ತಿಳಿಸತಕ್ಕದ್ದು.

(6) ಮಂಡಳಿಯು, ಯುಕ್ತ ಕಾಲದೊಳಗಾಗಿ ರಾಜ್ಯಸರ್ಕಾರಕ್ಕೆ ತೃಪ್ತಿಕರವಾಗುವಂತೆ ಕ್ರಮವನ್ನು ಕೈಗೊಳ್ಳದಿದ್ದಲ್ಲಿ, ಅಥವಾ ಯಾವುದೇ ಕ್ರಮವನ್ನು ಕೈಗೊಳ್ಳಲು ವಿಫಲವಾದಲ್ಲಿ, ಅವಶ್ಯವಿರುವಂಥ ನಿರ್ದೇಶನಗಳನ್ನು ಹೊರಡಿಸುವಂತೆ

ರಾಜ್ಯಸರ್ಕಾರವು, ಉಪ-ಕುಲಪತಿಯನ್ನು ಅಗತ್ಯಪಡಿಸಬಹುದು ಮತ್ತು ಅದನ್ನು ಪಾಲಿಸಲು ಮಂಡಳಿಯು ಬದ್ಧವಾಗಿರತಕ್ಕದ್ದು.

(7) ರಾಜ್ಯ ಸರ್ಕಾರವು, ಕಾಲಕಾಲಕ್ಕೆ ಅಗತ್ಯಪಡಿಸಬಹುದಾದ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸಂಬಂಧಪಟ್ಟ ವಿವರಪಟ್ಟಿಕೆಗಳನ್ನು, ವಿವರ ಪತ್ರಗಳನ್ನು, ಲೆಕ್ಕಪತ್ರಗಳನ್ನು ಅಥವಾ ಇತರ ವಿವರಗಳನ್ನು ಮಂಡಳಿಯು ಒದಗಿಸತಕ್ಕದ್ದು.

(8) ಹಿಂದಿನ ಉಪ-ಪ್ರಕರಣಗಳಲ್ಲಿ ಏನೇ ಇದ್ದಾಗ್ಯೂ, ರಾಜ್ಯಸರ್ಕಾರವು, ತನ್ನ ಅಭಿಪ್ರಾಯದಲ್ಲಿ ಈ ಅಧಿನಿಯಮ ಮತ್ತು ಶಾಸನಗಳಿಗೆ ಅನುಗುಣವಾಗಿಲ್ಲದ ವಿಶ್ವವಿದ್ಯಾನಿಲಯದ ಯಾವುದೇ ವ್ಯವಹರಣೆಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ರದ್ದುಗೊಳಿಸಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಮಾಡುವುದಕ್ಕೂ ಮೊದಲು, ರಾಜ್ಯಸರ್ಕಾರವು, ಅಂಥ ಆದೇಶವನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣ ತೋರಿಸುವಂತೆ ವಿಶ್ವವಿದ್ಯಾನಿಲಯವನ್ನು ಕೇಳತಕ್ಕದ್ದು ಮತ್ತು ಯುಕ್ತ ಕಾಲದೊಳಗಾಗಿ ಯಾವುದೇ ಕಾರಣವನ್ನು ತೋರಿಸಿದರೆ, ಅದನ್ನು ಪರಿಶೀಲಿಸತಕ್ಕದ್ದು.

(9) (8)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಸಾಧ್ಯವಾದಷ್ಟು ಬೇಗನೆ ರಾಜ್ಯವಿಧಾನ ಮಂಡಲದ ಎರಡೂ ಸದನಗಳ ಮುಂದೆ ಇಡತಕ್ಕದ್ದು.][1]

## ಅಧ್ಯಾಯ - III

## ವಿಶ್ವವಿದ್ಯಾನಿಲಯದ ಅಧಿಕಾರಿಗಳು

**9. ವಿಶ್ವವಿದ್ಯಾನಿಲಯದ ಅಧಿಕಾರಿಗಳು.–** ಈ ಕೆಳಕಂಡವರು ವಿಶ್ವವಿದ್ಯಾನಿಲಯದ ಅಧಿಕಾರಿಗಳಾಗಿರತಕ್ಕದ್ದು, ಎಂದರೆ:–

(1) ಕುಲಪತಿ,

(2) ಸಹ-ಕುಲಪತಿ,

(3) ಉಪ-ಕುಲಪತಿ,

(4) ಡೀನ್,

(5) ಲೆಕ್ಕ ನಿಯಂತ್ರಕ,

(6) ರಿಜಿಸ್ಟ್ರಾರ್,

(7) ಗ್ರಂಥಪಾಲಕ,

[1][(8) ಶಿಕ್ಷಣ ನಿರ್ದೇಶಕರು,][1]

1. (8)ನೇ ಖಂಡವನ್ನು 1986ರ ಅಧಿನಿಯಮ 14ರ ಮೂಲಕ 1.10.1986ರಿಂದ ಜಾರಿಗೆ ಬರುವಂತೆ (8), (9) ಮತ್ತು (10)ನೇ ಖಂಡಗಳಿಗೆ ಬದಲಾಗಿ ಪ್ರತಿಯೋಜಿಸಲಾಗಿದೆ.

(11) ಸಂಶೋಧನಾ ನಿರ್ದೇಶಕರು,

(12) ವಿಸ್ತರಣಾ ನಿರ್ದೇಶಕರು,

(13) ವಿಭಾಗದ ಮುಖ್ಯಸ್ಥರು, ಮತ್ತು

(14) ಶಾಸನಗಳ ಮೂಲಕ ವಿಶ್ವವಿದ್ಯಾನಿಲಯದ ಅಧಿಕಾರಿಗಳೆಂದು ಘೋಷಿಸಬಹುದಾದ ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವ ಅಂಥ ಇತರ ಅಧಿಕಾರಿಗಳು.

**10. ಕುಲಪತಿ.–** (1) [1][ಕರ್ನಾಟಕ ರಾಜ್ಯ][1] ದ ರಾಜ್ಯಪಾಲನು ತನ್ನ ಸ್ಥಾನಬಲದಿಂದಾಗಿ ವಿಶ್ವವಿದ್ಯಾನಿಲಯದ ಕುಲಪತಿಯಾಗಿರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಕುಲಪತಿಯು, ವಿಶ್ವವಿದ್ಯಾನಿಲಯದ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಹಾಜರಿದ್ದಾಗ, ವಿಶ್ವವಿದ್ಯಾನಿಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ವಿಶ್ವವಿದ್ಯಾನಿಲಯವು ಕುಲಪತಿಯ ಅನುಮೋದನೆ ಇಲ್ಲದೆ ಯಾವ ವ್ಯಕ್ತಿಗೂ ಗೌರವ ಪದವಿಗಳನ್ನು ಪ್ರದಾನಮಾಡತಕ್ಕದ್ದಲ್ಲ.

(4) ಕುಲಪತಿಯು, ಈ ಅಧಿನಿಯಮದ ಅಥವಾ ಶಾಸನಗಳ ಮೂಲಕ ಅವನಿಗೆ ಪ್ರದಾನ ಮಾಡಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಅಥವಾ ವಿಧಿಸಬಹುದಾದಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**11. ಸಹ–ಕುಲಪತಿ.–** (1) [1][ಕರ್ನಾಟಕ ರಾಜ್ಯ][1]ದ ಕೃಷಿ ಸಚಿವನು ತನ್ನ ಸ್ಥಾನಬಲದಿಂದಾಗಿ ವಿಶ್ವವಿದ್ಯಾನಿಲಯದ ಸಹ–ಕುಲಪತಿಯಾಗಿರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಸಹ–ಕುಲಪತಿಯು ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಅಥವಾ ಶಾಸನಗಳ ಮೇರೆಗೆ ಅವನಲ್ಲಿ ಪ್ರದತ್ತಗೊಳಿಸಬಹುದಾದಂಥ ಕುಲಪತಿಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಕುಲಪತಿಯು ಲಿಖಿತದಲ್ಲಿ ಸಹ–ಕುಲಪತಿಗೆ ಆದೇಶದ ಮೂಲಕ ಪ್ರತ್ಯಾಯೋಜಿಸಬಹುದಾದಂತೆ ಕುಲಪತಿಯ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನೂ ಸಹ ನಿರ್ವಹಿಸತಕ್ಕದ್ದು ಮತ್ತು ಅಂಥ ಪ್ರತ್ಯಾಯೋಜನೆಯು ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

**12. ಉಪ–ಕುಲಪತಿ.–** (1) ಉಪಕುಲಪತಿಯು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

[1][(2) ಕುಲಪತಿಯು, ಮಹಾನಿರ್ದೇಶಕರನ್ನು, ಭಾರತೀಯ ಕೃಷಿ ಸಂಶೋಧನಾ ಪರಿಷತ್ತನ್ನು, ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗದ ಅಧ್ಯಕ್ಷರನ್ನು, ಅಥವಾ ಆತನ ನಾಮನಿರ್ದೇಶಿತ ವ್ಯಕ್ತಿಯನ್ನು ಮತ್ತು ರಾಜ್ಯಸರ್ಕಾರವು ನಾಮನಿರ್ದೇಶಿಸಿದ ವ್ಯಕ್ತಿಯನ್ನು ಒಳಗೊಂಡ ಆಯ್ಕೆ ಸಮಿತಿಯು ಶಿಫಾರಸು ಮಾಡಿದ ಹೆಸರುಗಳ ಪಟ್ಟಿಯಿಂದ ಉಪ–ಕುಲಪತಿಯನ್ನು ನೇಮಕ ಮಾಡತಕ್ಕದ್ದು. ಸಮಿತಿಯ ಸದಸ್ಯನಾಗಿ ನಾಮನಿರ್ದೇಶಿತನಾದ ಯಾವನೇ ವ್ಯಕ್ತಿಯು ವಿಶ್ವವಿದ್ಯಾನಿಲಯವು ನಿರ್ವಹಿಸಿದ ಅಥವಾ ಆಡಳಿತ ನಡೆಸಿದ ವಿಶ್ವವಿದ್ಯಾನಿಲಯದೊಂದಿಗೆ ಅಥವಾ ಯಾವುದೇ ಸಂಸ್ಥೆಯೊಂದಿಗೆ ಸಂಬಂಧ ಹೊಂದಿರತಕ್ಕದ್ದಲ್ಲ. ಕುಲಪತಿಯು, ಸದಸ್ಯರಲ್ಲಿ ಒಬ್ಬನನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡತಕ್ಕದ್ದು:

ಪರಂತು, ಕುಲಪತಿಯು, ಸಮಿತಿಯು ಶಿಫಾರಸು ಮಾಡಿದ ಯಾವುದೇ ಹೆಸರನ್ನು ಅನುಮೋದಿಸದಿದ್ದರೆ, ಆತನು ಸಮಿತಿಯಿಂದ ಹೊಸ ಶಿಫಾರಸುಗಳನ್ನು ತರಿಸಿಕೊಳ್ಳಬಹುದು:][1]

1. 1987ರ ಅಧಿನಿಯಮ 40ರ ಮೂಲಕ 31.12.1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಸಮಿತಿಯು ಶಿಫಾರಸು ಮಾಡಿದವರಲ್ಲಿ ಯಾವ ವ್ಯಕ್ತಿಗಳೂ ನೇಮಕವನ್ನು ಒಪ್ಪಿಕೊಳ್ಳಲು ಬಯಸದಿದ್ದರೆ, ಕುಲಪತಿಯು ಅಂಥ ಸಮಿತಿಯಿಂದ ಹೊಸ ಶಿಫಾರಸುಗಳನ್ನು ತರಿಸಿಕೊಳ್ಳಬಹುದು:

ಮತ್ತೂ ಪರಂತು, ಮೊದಲ ಉಪ-ಕುಲಪತಿಯನ್ನು ರಾಜ್ಯಸರ್ಕಾರದ ಶಿಫಾರಸಿನ ಮೇಲೆ ಕುಲಪತಿಯು ನೇಮಕ ಮಾಡತಕ್ಕದ್ದು.

(3) ಸಮಿತಿಯು, ಕುಲಪತಿಯು ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಹೆಸರಿನ ಪಟ್ಟಿಯನ್ನು ಅವನಿಗೆ ಸಲ್ಲಿಸತಕ್ಕದ್ದು. ಹಾಗೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸಮಿತಿಯು ಪಟ್ಟಿಯನ್ನು ಸಲ್ಲಿಸಲು ವಿಫಲವಾದರೆ, ಕುಲಪತಿಯು, ತಾನು ಸೂಕ್ತವೆಂದು ಭಾವಿಸುವ ಯಾವನೇ ವ್ಯಕ್ತಿಯನ್ನು ಉಪ-ಕುಲಪತಿಯನ್ನಾಗಿ ನೇಮಕ ಮಾಡಬಹುದು.

[1][(3ಎ) (2) ಮತ್ತು (3)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಮೊದಲ ಉಪ-ಕುಲಪತಿಯನ್ನು ರಾಜ್ಯಸರ್ಕಾರದ ಶಿಫಾರಸಿನ ಮೇಲೆ ಕುಲಪತಿಯು ನೇಮಕ ಮಾಡತಕ್ಕದ್ದು.][1]

1. 1986ರ ಅಧಿನಿಯಮ 14ರ ಮೂಲಕ 1.10.1986ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) ಉಪ-ಕುಲಪತಿಯ ಪದಾವಧಿಯು ಮೂರು ವರ್ಷಗಳ ಅವಧಿಯವರೆಗೆ ಇರತಕ್ಕದ್ದು. ಯಾವುದೇ ಸಂದರ್ಭದಲ್ಲಿ, ಅಂಥ ವಿಸ್ತರಣೆಯನ್ನು ಅವಶ್ಯವೆಂದು ಪರಿಗಣಿಸಿದರೆ ಮತ್ತು ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳಿಗಾಗಿ ಮಂಡಳಿಯ ಶಿಫಾರಸಿನ ಮೇಲೆ ಕುಲಪತಿಯ ಆದೇಶದ ಮೂಲಕ ಅಂಥ ವಿಸ್ತರಿಸಲಾಗುವ ಅವಧಿಯು ಒಟ್ಟು ಆರು ತಿಂಗಳಿಗೆ ಮೀರದ ಅವಧಿಯದ್ದಾಗಿರತಕ್ಕದ್ದು:

ಪರಂತು,-

(ಎ) ಉಪ-ಕುಲಪತಿಯು, ತನ್ನ ಸಹಿ ಹಾಕಿ ಲಿಖಿತದಲ್ಲಿ ಕುಲಪತಿಗೆ ಬರೆಯುವ ಮೂಲಕ ಮತ್ತು ಮೂರು ತಿಂಗಳ ನೋಟೀಸನ್ನು ನೀಡಿದ ನಂತರ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು; ಅಥವಾ

(ಬಿ) ಉಪ-ಕುಲಪತಿಯನ್ನು (5)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಆತನ ಪದದಿಂದ ತೆಗೆದುಹಾಕಬಹುದು.

(5) ಉಪ-ಕುಲಪತಿಯನ್ನು ಆ ಪದದಲ್ಲಿ ಮುಂದುವರಿಸುವುದು ವಿಶ್ವವಿದ್ಯಾನಿಲಯದ ಹಿತಾಸಕ್ತಿಗೆ ಹಾನಿಕರವೆಂದು ಕುಲಪತಿಯು ಅಭಿಪ್ರಾಯಪಟ್ಟಲ್ಲಿ, ಕುಲಪತಿಯು, ಮೂರನೇ ಎರಡರಷ್ಟು ಸದಸ್ಯರ ಬೆಂಬಲ ಪಡೆದ ಮಂಡಳಿಯ ಶಿಫಾರಸಿನ ಮೇಲೆ, ಯಾವುದೇ ಕಾಲದಲ್ಲಿ ಆದೇಶದ ಮೂಲಕ, ಆತನನ್ನು ಹುದ್ದೆಯಿಂದ ತೆಗೆದುಹಾಕಬಹುದು:

ಪರಂತು, ತೆಗೆದುಕೊಳ್ಳಲು ಉದ್ದೇಶಿಸಲಾದ ಕ್ರಮದ ವಿರುದ್ಧ ಅಹವಾಲನ್ನು ಹೇಳಿಕೊಳ್ಳಲು ಉಪ-ಕುಲಪತಿಗೆ ಅವಕಾಶವನ್ನು ಕೊಟ್ಟ ಹೊರತು ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

[1][(6) ಎರಡು ಅವಧಿಗಳಿಗಿಂತ ಹೆಚ್ಚಾಗಿ ಯಾವನೇ ವ್ಯಕ್ತಿಯನ್ನು ಉಪ-ಕುಲಪತಿಯನ್ನಾಗಿ ನೇಮಕ ಮಾಡತಕ್ಕದ್ದಲ್ಲ.

(6ಎ) ಯಾವ ವ್ಯಕ್ತಿಯನ್ನೂ, ಅವನಿಗೆ ಅರವತ್ತೈದು ವರ್ಷ ವಯಸ್ಸಾಗಿದ್ದರೆ, ಉಪ-ಕುಲಪತಿಯಾಗಿ ನೇಮಕ ಮಾಡತಕ್ಕದ್ದಲ್ಲ ಅಥವಾ ಅವನು ಆ ಪದವನ್ನು ಹೊಂದತಕ್ಕದ್ದಲ್ಲ.][1]

1. 1987ರ ಅಧಿನಿಯಮ 40ರ ಮೂಲಕ 31.12.1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(7) ಉಪ–ಕುಲಪತಿಯ ವೇತನ, ಇತ್ಯಾದಿಗಳು ಮತ್ತು ಇತರ ಸೇವಾ ಷರತ್ತುಗಳು, ಕುಲಪತಿಯು ನಿರ್ಣಯಿಸಬಹುದಾದಂತೆ ಇರತಕ್ಕದ್ದು ಮತ್ತು ಆತನ ನೇಮಕದ ನಂತರ ಆತನಿಗೆ ಅನಾನುಕೂಲವಾಗುವ ಹಾಗೆ ಅವುಗಳನ್ನು ವ್ಯತ್ಯಾಸಗೊಳಿಸತಕ್ಕದ್ದಲ್ಲ.

(8) ಉಪಕುಲಪತಿಯ ಪದಾವಧಿಯು ಮುಕ್ತಾಯವಾದ ಕಾರಣವನ್ನು ಹೊರತುಪಡಿಸಿ, ರಜೆ, ಅನಾರೋಗ್ಯ ಅಥವಾ ಇತರ ಕಾರಣದಿಂದ ಅಥವಾ ಉಪಕುಲಪತಿಯು ಗೈರುಹಾಜರಾಗಿರುವುದರಿಂದಾಗಿ ಅಥವಾ ಅನ್ಯಥಾ ಆತನ ಅಧಿಕಾರಗಳನ್ನು ಚಲಾಯಿಸಲು ಅಥವಾ ಆತನ ಪ್ರಕಾರ್ಯಗಳನ್ನು ತಾತ್ಕಾಲಿಕವಾಗಿ ನಿರ್ವಹಿಸಲು ಅನ್ಯಥಾ ಅಸಮರ್ಥನಾದ ಕಾರಣದಿಂದ ಆತನ ಪದದಲ್ಲಿ ತಾತ್ಕಾಲಿಕ ಖಾಲಿಸ್ಥಾನ ಉಂಟಾದರೆ ಅಥವಾ ಉಂಟಾಗುವ ಸಂಭವವಿದ್ದರೆ, ಉಪಕುಲಪತಿಯಾಗಿ ಕಾರ್ಯನಿರ್ವಹಿಸಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡುವವರೆಗೆ ಅಥವಾ ಸಂದರ್ಭಾನುಸಾರ ಉಪ ಕುಲಪತಿಯು ಕರ್ತವ್ಯಕ್ಕೆ ಮರಳುವವರೆಗೆ, ಡೀನ್‌ನು ತನ್ನ ಪ್ರಕಾರ್ಯಗಳ ಜೊತೆಗೆ ಉಪಕುಲಪತಿಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಅಥವಾ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಡೀನ್‌ನ ಗೈರುಹಾಜರಿಯಲ್ಲಿ ಉಪ–ಕುಲಪತಿಯ ಪದದ ಕರ್ತವ್ಯಗಳನ್ನು ನಡೆಸಿಕೊಂಡು ಹೋಗಲು ಮಂಡಳಿಯು ಸಾಧ್ಯವಾದಷ್ಟು ಬೇಗನೆ ಮತ್ತು ಕುಲಪತಿಯ ಅನುಮೋದನೆಗೊಳಪಟ್ಟು ಅದು ಸೂಕ್ತವೆಂದು ಭಾವಿಸುವಂಥ ವ್ಯವಸ್ಥೆಗಳನ್ನು ಮಾಡತಕ್ಕದ್ದು ಮತ್ತು ಅಂಥ ವ್ಯವಸ್ಥೆಗಳನ್ನು ಮಾಡುವವರೆಗೆ, ಆ ಉದ್ದೇಶಕ್ಕಾಗಿ ಕುಲಪತಿಯು ನಾಮನಿರ್ದೇಶನ ಮಾಡಬಹುದಾದಂಥ ವಿಶ್ವವಿದ್ಯಾನಿಲಯದ ಅಧಿಕಾರಿಯು ಉಪ–ಕುಲಪತಿಯ ಪದದ ಚಾಲ್ತಿ ಕರ್ತವ್ಯಗಳನ್ನು ನಡೆಸಿಕೊಂಡು ಹೋಗತಕ್ಕದ್ದು.

**13. ಉಪ–ಕುಲಪತಿಯ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ಉಪ–ಕುಲಪತಿಯು ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯನಿರ್ವಾಹಕ ಮತ್ತು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಅಧಿಕಾರಿ ಮತ್ತು ಮಂಡಳಿ ಹಾಗೂ ಶೈಕ್ಷಣಿಕ ಪರಿಷತ್ತಿನ ಪದನಿಮಿತ್ತ ಅಧ್ಯಕ್ಷನು ಆಗಿರತಕ್ಕದ್ದು. ಕುಲಪತಿ ಹಾಗೂ ಸಹ–ಕುಲಪತಿಯ ಗೈರುಹಾಜರಿಯಲ್ಲಿ ಆತನು, ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಪದವಿಗಳನ್ನು ಪಡೆಯಲು ಅರ್ಹರಾದ ವ್ಯಕ್ತಿಗಳಿಗೆ ಅವುಗಳನ್ನು ಪ್ರದಾನ ಮಾಡತಕ್ಕದ್ದು.

(2) ಉಪ–ಕುಲಪತಿಯು ವಿಶ್ವವಿದ್ಯಾನಿಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಚಲಾಯಿಸತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದಲ್ಲಿ ಅಗತ್ಯ ಶಿಸ್ತು ನಿರ್ವಹಣೆಗೆ ಅವನು ಜವಾಬ್ದಾರನಾಗಿರತಕ್ಕದ್ದು.

(3) ಉಪ–ಕುಲಪತಿಯು ಮಂಡಳಿಯ ಮತ್ತು ಶೈಕ್ಷಣಿಕ ಪರಿಷತ್ತಿನ ಸಭೆಗಳನ್ನು ಕರೆಯತಕ್ಕದ್ದು.

(4) ಉಪ–ಕುಲಪತಿಯು, ಈ ಅಧಿನಿಯಮದ ಮತ್ತು ಶಾಸನಗಳ ಮತ್ತು ವಿನಿಯಮನಗಳ ಉಪಬಂಧಗಳ ಪ್ರಾಮಾಣಿಕ ಪರಿಪಾಲನೆ ಆಗುತ್ತಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಆತನು ಈ ಸಂಬಂಧದಲ್ಲಿ ಅವಶ್ಯವಿರಬಹುದಾದಂಥ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(5) ಉಪ–ಕುಲಪತಿಯು ವಾರ್ಷಿಕ ಹಣಕಾಸು ಅಂದಾಜುಗಳನ್ನು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಮತ್ತು ಜಮಾಖರ್ಚು ಪಟ್ಟಿಯನ್ನು ಮಂಡಳಿಗೆ ಮಂಡಿಸಲು ಜವಾಬ್ದಾರನಾಗಿರತಕ್ಕದ್ದು.

(6) ಉಪ–ಕುಲಪತಿಯು, ತ್ವರಿತ ಕ್ರಮವು ಅಗತ್ಯವೆಂದು ಆತನು ಅಭಿಪ್ರಾಯಪಡುವ ಯಾವುದೇ ತುರ್ತು ಸಂದರ್ಭದಲ್ಲಿ ಕುಲಪತಿಯ ನಿಯಂತ್ರಣಕ್ಕೊಳಪಟ್ಟು ಕ್ರಮ ತೆಗೆದುಕೊಳ್ಳಬಹುದು. ಅವನು ಅಂಥ ಸಂದರ್ಭದಲ್ಲಿ ಮತ್ತು ಆ ತರುವಾಯ ಆದಷ್ಟು ಬೇಗನೆ, ಸಾಮಾನ್ಯವಾಗಿ ಆ ವಿಷಯದ ಬಗ್ಗೆ ವ್ಯವಹರಿಸುವಂಥ ಪ್ರಾಧಿಕಾರಕ್ಕೆ ತಾನು ಕೈಗೊಂಡ ಕ್ರಮದ ಬಗ್ಗೆ ವರದಿ ಮಾಡತಕ್ಕದ್ದು.

(7) (6)ನೇ ಉಪ-ಪ್ರಕರಣದ ಅಡಿಯಲ್ಲಿ ಉಪ-ಕುಲಪತಿಯು ತೆಗೆದುಕೊಂಡ ಯಾವುದೇ ಕ್ರಮದಿಂದ ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವ ಯಾವನೇ ವ್ಯಕ್ತಿ ಬಾಧಿತನಾಗಿದ್ದರೆ, ಅಂಥ ಕ್ರಮದ ಬಗ್ಗೆ ನೋಟೀಸು ಪಡೆದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಮಂಡಳಿಗೆ ಆ ವ್ಯಕ್ತಿಯು ಒಂದು ಅಪೀಲನ್ನು ಸಲ್ಲಿಸಬಹುದು.

(8) ಮಂಡಳಿಯ ಅಪೀಲು ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಆತನಿಗೆ ಅಂಥ ಆದೇಶವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕುಲಪತಿಗೆ ಅಪೀಲು ಸಲ್ಲಿಸಬಹುದು ಮತ್ತು ಅಂಥ ಅಪೀಲಿನ ಮೇಲೆ ಕುಲಪತಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(9) ಹಿಂದಿನ ಉಪ-ಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಉಪ-ಕುಲಪತಿಯು, ವಿಶ್ವವಿದ್ಯಾನಿಲಯದ ಅಧಿಕಾರಿಗಳ, ಅಧ್ಯಾಪಕರುಗಳ ಮತ್ತು ಇತರ ನೌಕರರ ನೇಮಕಾತಿ, ಅಮಾನತು ಮತ್ತು ವಜಾ ಮಾಡುವ ಬಗೆಗಿನ ಮಂಡಳಿಯ ಆದೇಶಗಳನ್ನು ಜಾರಿಮಾಡತಕ್ಕದ್ದು.

(10) ಉಪ-ಕುಲಪತಿಯು ವಿಶ್ವವಿದ್ಯಾನಿಲಯದ ಸಮರ್ಪಕ ಆಡಳಿತಕ್ಕೆ ಮತ್ತು ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣದ ನಿಕಟ ಸಮನ್ವಯಕ್ಕೆ ಮತ್ತು ಸಮಗ್ರತೆಗೆ ಹೊಣೆಯಾಗಿರತಕ್ಕದ್ದು.

(11) ಗೊತ್ತುಪಡಿಸಬಹುದಾದಂಥ ಇತರ ಅಧಿಕಾರಗಳನ್ನು ಉಪ-ಕುಲಪತಿಯು ಚಲಾಯಿಸತಕ್ಕದ್ದು.

**14. ಡೀನ್.–** (1) ಡೀನ್‌ನು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಆತನನ್ನು ಮಂಡಳಿಯ ಶಿಫಾರಸಿನ ಮೇಲೆ ಕುಲಪತಿಯು ನೇಮಕ ಮಾಡತಕ್ಕದ್ದು.

(2) ಡೀನ್‌ನ ಅಧಿಕಾರಾವಧಿ ಮತ್ತು ಆತನ ವೇತನ ಇತ್ಯಾದಿಗಳು ಮತ್ತು ಇತರ ಸೇವಾ ಷರತ್ತುಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು ಮತ್ತು ಅವುಗಳನ್ನು ನೇಮಕಾತಿಯ ನಂತರ ಆತನಿಗೆ ಅನಾನುಕೂಲವಾಗುವಂತೆ ವ್ಯತ್ಯಾಸಗೊಳಿಸತಕ್ಕದ್ದಲ್ಲ.

(3) ಉಪ-ಕುಲಪತಿಯು ಮಂಡಳಿಯ ಅನುಮೋದನೆಯೊಂದಿಗೆ ಡೀನ್‌ನಿಗೆ ಪ್ರತ್ಯಾಯೋಜಿಸ ಬಹುದಾದಂಥ ಉಪ-ಕುಲಪತಿಯ ಅಧಿಕಾರಗಳನ್ನು ಡೀನ್‌ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**15. ಲೆಕ್ಕ ನಿಯಂತ್ರಕ.–** (1) ಲೆಕ್ಕ ನಿಯಂತ್ರಕನು, ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಆತನನ್ನು ಮಂಡಳಿಯೊಂದಿಗೆ ಸಮಾಲೋಚಿಸಿ ಉಪ-ಕುಲಪತಿಯು ನೇಮಕಮಾಡತಕ್ಕದ್ದು.

[1][(2) ಲೆಕ್ಕನಿಯಂತ್ರಕನ ಸಂಬಳ ಮತ್ತು ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.][1]

1. 1987ರ ಅಧಿನಿಯಮ 40ರ ಮೂಲಕ 31.12.1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಲೆಕ್ಕ ನಿಯಂತ್ರಕನು, ವಿಶ್ವವಿದ್ಯಾನಿಲಯದ ಸ್ವತ್ತುಗಳನ್ನು ಮತ್ತು ಹೂಡಿಕೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಅದರ ಹಣಕಾಸು ನೀತಿಯ ಬಗ್ಗೆ ಸಲಹೆ ನೀಡತಕ್ಕದ್ದು. ಆತನು, ವಿಶ್ವವಿದ್ಯಾನಿಲಯದ ವಾರ್ಷಿಕ ಹಣಕಾಸು ಅಂದಾಜುಗಳನ್ನು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಮತ್ತು ಜಮಾಖರ್ಚು ಪಟ್ಟಿಯನ್ನು ಸಿದ್ಧಪಡಿಸುವುದೂ ಒಳಗೊಂಡಂತೆ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳಿಗೆ ಸಂಬಂಧಪಟ್ಟ ಎಲ್ಲ ವಿಷಯಗಳಿಗೆ ಹೊಣೆಗಾರನಾಗಿರತಕ್ಕದ್ದು.

(4) ಲೆಕ್ಕ ನಿಯಂತ್ರಕನು,–

(ಎ) ಮಂಡಳಿಯು ಅನುಮೋದಿಸಿದ ಹಣಕಾಸು ಅಂದಾಜುಗಳಲ್ಲಿ ಅಧಿಕೃತಗೊಳಿಸಿಲ್ಲದ ಯಾವುದೇ ವೆಚ್ಚವನ್ನೂ ವಿಶ್ವವಿದ್ಯಾನಿಲಯವು ಮಾಡಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು; ಮತ್ತು

(ಬಿ) ಯಾವುದೇ ಶಾಸನದ ನಿಬಂಧನೆಗಳ ಮೂಲಕ ಅಗತ್ಯಪಡಿಸದಿರುವ ಅಥವಾ ಶಾಸನದ ಮೂಲಕ ಉಪಬಂಧ ಕಲ್ಪಿಸಬೇಕಾಗಿದ್ದಾಗ, ಆದರೆ ಇನ್ನೂ ಕಲ್ಪಿಸದಿದ್ದಾಗ, ಯಾವುದೇ ವೆಚ್ಚವನ್ನು ಅನುಮತಿಸತಕ್ಕದ್ದಲ್ಲ.

**16. ರಿಜಿಸ್ಟ್ರಾರ್.–** (1) ರಿಜಿಸ್ಟ್ರಾರನು, ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿ ಯಾಗಿರತಕ್ಕದ್ದು ಮತ್ತು ಆತನನ್ನು ಮಂಡಳಿಯ ಅನುಮೋದನೆಯೊಂದಿಗೆ ಉಪ–ಕುಲಪತಿಯು ನೇಮಕ ಮಾಡತಕ್ಕದ್ದು.

(2) ರಿಜಿಸ್ಟ್ರಾರನ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

(3) ರಿಜಿಸ್ಟ್ರಾರನು, ವಿಶ್ವವಿದ್ಯಾನಿಲಯದ ದಾಖಲೆಗಳ ಮತ್ತು ಸಾಮಾನ್ಯ ಮೊಹರಿನ ಅಗತ್ಯ ಅಭಿರಕ್ಷೆಗೆ ಜವಾಬ್ದಾರನಾಗಿರತಕ್ಕದ್ದು. ಅವನು ಶೈಕ್ಷಣಿಕ ಪರಿಷತ್ತಿನ ಮತ್ತು ಮಂಡಳಿಯ ಪದನಿಮಿತ್ತ ಕಾರ್ಯದರ್ಶಿ ಯಾಗಿರತಕ್ಕದ್ದು, ಮತ್ತು ವ್ಯವಹಾರ ನಿರ್ವಹಣೆಗೆ ಅವಶ್ಯವಿರಬಹುದಾದಂಥ ಎಲ್ಲ ಮಾಹಿತಿಗಳನ್ನು ಅವುಗಳ ಮುಂದೆ ಮಂಡಿಸಲು ಬದ್ಧನಾಗಿರತಕ್ಕದ್ದು. ಆತನು ವಿಶ್ವವಿದ್ಯಾನಿಲಯದ ಪ್ರವೇಶಕ್ಕೆ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು, ಮತ್ತು ಎಲ್ಲ ಅಧ್ಯಯನ ಕ್ರಮಗಳು, ಪಠ್ಯಕ್ರಮ ಮತ್ತು ಅವಶ್ಯವಿರಬಹುದಾದ ಇತರ ಮಾಹಿತಿಗಳ ಖಾಯಂ ದಾಖಲೆಯನ್ನು ಇಡತಕ್ಕದ್ದು.

(4) ರಿಜಿಸ್ಟ್ರಾರನು, ಗೊತ್ತುಪಡಿಸಬಹುದಾದಂಥ ಪರೀಕ್ಷೆಗಳನ್ನು ನಡೆಸಲು ವ್ಯವಸ್ಥೆ ಮಾಡುವುದಕ್ಕೆ ಜವಾಬ್ದಾರನಾಗಿರತಕ್ಕದ್ದು ಮತ್ತು ಅದಕ್ಕೆ ಅವಶ್ಯವಿರುವ ಎಲ್ಲ ಇತರ ವ್ಯವಸ್ಥೆಗಳನ್ನು ಮಾಡತಕ್ಕದ್ದು ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳ ಯುಕ್ತ ನಿರ್ವಹಣೆಗೆ ಹೊಣೆಗಾರನಾಗಿರತಕ್ಕದ್ದು.

(5) ರಿಜಿಸ್ಟ್ರಾರನು, ಮಂಡಳಿಯು ಅಥವಾ ಉಪಕುಲಪತಿಯು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಅಥವಾ ಅಗತ್ಯಪಡಿಸಬಹುದಾದಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**17. ಗ್ರಂಥಪಾಲಕ.–** (1) ಗ್ರಂಥಪಾಲಕನನ್ನು ಉಪ–ಕುಲಪತಿಯು ನೇಮಕ ಮಾಡತಕ್ಕದ್ದು ಮತ್ತು ಆತನು ಗ್ರಂಥಾಲಯದ ಪ್ರಭಾರವನ್ನು ಹೊಂದಿರತಕ್ಕದ್ದು. ಗ್ರಂಥಾಲಯಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ಆತನು ಉಪ–ಕುಲಪತಿಗೆ ಹೊಣೆಗಾರನಾಗಿರತಕ್ಕದ್ದು.

(2) ಗ್ರಂಥಪಾಲಕನ ಸಂಬಳ ಮತ್ತು ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

**18. ಶಿಕ್ಷಣ ನಿರ್ದೇಶಕರುಗಳು.–** (1) [1][ಶಿಕ್ಷಣದ ನಿರ್ದೇಶಕರುಗಳು][1] ಪೂರ್ಣಕಾಲಿಕ ಅಧಿಕಾರಿ ಗಳಾಗಿರತಕ್ಕದ್ದು ಮತ್ತು ಅವರನ್ನು, ಮಂಡಳಿಯ ಅನುಮೋದನೆಯೊಂದಿಗೆ, ಕುಲಪತಿಯು ನೇಮಕ ಮಾಡತಕ್ಕದ್ದು.

1. 1986ರ ಅಧಿನಿಯಮ 14ರ ಮೂಲಕ 1.10.1986 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಪ್ರತಿಯೊಬ್ಬ ನಿರ್ದೇಶಕನ ಸಂಬಳ ಮತ್ತು ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

(3) ಪ್ರತಿಯೊಬ್ಬ ನಿರ್ದೇಶಕನು, ತನ್ನ ನಿಯಂತ್ರಣದಲ್ಲಿರುವ ಕಾಲೇಜಿಗೆ ಅಥವಾ ಕಾಲೇಜುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ಉಪ–ಕುಲಪತಿಗೆ ಹೊಣೆಗಾರನಾಗಿರತಕ್ಕದ್ದು.

(4) ಪ್ರತಿಯೊಬ್ಬ ನಿರ್ದೇಶಕನು, ತನ್ನ ನಿಯಂತ್ರಣದಲ್ಲಿರುವ ಕಾಲೇಜಿನ ಮತ್ತು ಕಾಲೇಜುಗಳ ಸಂಘಟನೆ ಮತ್ತು ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣವನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(5) ಪ್ರತಿಯೊಬ್ಬ ನಿರ್ದೇಶಕನು, ಗೊತ್ತುಪಡಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**19. ಸಂಶೋಧನಾ ನಿರ್ದೇಶಕ.–** (1) ಸಂಶೋಧನಾ ನಿರ್ದೇಶಕನು ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಆತನನ್ನು, ಮಂಡಳಿಯ ಅನುಮೋದನೆಯೊಂದಿಗೆ, ಉಪ ಕುಲಪತಿಯು ನೇಮಕ ಮಾಡತಕ್ಕದ್ದು. ಅವನು ಸಂಶೋಧನಾ ಕೇಂದ್ರಗಳ ಕಾರ್ಯಗಳ ಯುಕ್ತ ನಿರ್ವಹಣೆಗೆ ಜವಾಬ್ದಾರನಾಗಿರತಕ್ಕದ್ದು ಮತ್ತು ಸಂಶೋಧನಾ ಕಾರ್ಯವನ್ನು ಸಮನ್ವಯಗೊಳಿಸತಕ್ಕದ್ದು, ಗೊತ್ತುಪಡಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಸಂಶೋಧನಾ ನಿರ್ದೇಶಕರ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

**20. ವಿಸ್ತರಣಾ ನಿರ್ದೇಶಕ.–** (1) ವಿಸ್ತರಣಾ ನಿರ್ದೇಶಕನು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಆತನನ್ನು ಮಂಡಲಿಯ ಅನುಮೋದನೆಯೊಂದಿಗೆ ಉಪ–ಕುಲಪತಿಯು ನೇಮಕಮಾಡತಕ್ಕದ್ದು. ಅವನು ಸಂಶೋಧನಾ ಕಾರ್ಯದ ಫಲಿತಾಂಶಗಳ ಮೇಲೆ ಆಧಾರಿತವಾದ ವಿಸ್ತರಣಾ ಕಾರ್ಯಕ್ರಮಗಳನ್ನು ಯೋಜಿಸಲು ಮತ್ತು ನಿರ್ವಹಿಸಲು ಜವಾಬ್ದಾರನಾಗಿರತಕ್ಕದ್ದು ಮತ್ತು ಗೊತ್ತುಪಡಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ವಿಸ್ತರಣಾ ನಿರ್ದೇಶಕನ ಸಂಬಳ ಮತ್ತು ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

**21. ವಿಭಾಗಗಳ ಮುಖ್ಯಸ್ಥರು.–** (1) ಈ ಮುಂದೆ ಹೇಳಿರುವ ವಿಭಾಗಗಳ ಮುಖ್ಯಸ್ಥರು ಇರತಕ್ಕದ್ದು, ಎಂದರೆ:–

(i) ಮೂಲ ವಿಜ್ಞಾನಗಳು ಮತ್ತು ಮಾನವಿಕಗಳ ವಿಭಾಗದ ಮುಖ್ಯಸ್ಥ.

(ii) ಸಸ್ಯ ಮತ್ತು ಮಣ್ಣು ವಿಜ್ಞಾನಗಳ ವಿಭಾಗದ ಮುಖ್ಯಸ್ಥ.

(iii) ತೋಟಗಾರಿಕೆ ವಿಜ್ಞಾನಗಳ ವಿಭಾಗದ ಮುಖ್ಯಸ್ಥ.

(iv) ಪ್ರಾಣಿ ವಿಜ್ಞಾನಗಳ ವಿಭಾಗದ ಮುಖ್ಯಸ್ಥ.

(v) ಹೈನುಗಾರಿಕೆ ವಿಜ್ಞಾನಗಳ ವಿಭಾಗದ ಮುಖ್ಯಸ್ಥ.

(vi) ಪಶುವೈದ್ಯ ವಿಜ್ಞಾನಗಳ ವಿಭಾಗದ ಮುಖ್ಯಸ್ಥ.

(vii) ಮೀನುಗಾರಿಕೆ ವಿಜ್ಞಾನಗಳ ವಿಭಾಗದ ಮುಖ್ಯಸ್ಥ.

(viii) ಗೃಹ ಅರ್ಥಶಾಸ್ತ್ರವಿಭಾಗದ ಮುಖ್ಯಸ್ಥ.

(ix) ಕೃಷಿ ಇಂಜಿನಿಯರಿಂಗ್ ವಿಜ್ಞಾನಗಳ ವಿಭಾಗದ ಮುಖ್ಯಸ್ಥ.

(2) ವಿಭಾಗಗಳ ಮುಖ್ಯಸ್ಥರು ಸಂಬಂಧಪಟ್ಟ ವಿಷಯದಲ್ಲಿ ತಾಂತ್ರಿಕವಾಗಿ ತರಬೇತಿ ಪಡೆದಿರುವ ಪೂರ್ಣಕಾಲಿಕ ಅಧಿಕಾರಿಗಳಾಗಿರತಕ್ಕದ್ದು ಮತ್ತು ಅವರು ಡೀನ್‌ನಿಗೆ ಹಾಗೂ ಸಂಬಂಧಪಟ್ಟ ನಿರ್ದೇಶಕರಿಗೆ ಜವಾಬ್ದಾರರಾಗಿರತಕ್ಕದ್ದು ಮತ್ತು ಆಯಾ ವಿಭಾಗಕ್ಕೆ ಸಂಬಂಧಪಟ್ಟಂತೆ ಗೊತ್ತುಪಡಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(3) ವಿಭಾಗಗಳ ಮುಖ್ಯಸ್ಥರ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

**22. ವಿಶ್ವವಿದ್ಯಾನಿಲಯದ ಅಧಿಕಾರಿಗಳು ಶಾಸನಗಳ ಮೂಲಕ ಉಪಬಂಧಿಸಿರುವುದರ ಹೊರತು ಯಾವುದೇ ಇತರ ಸಂಭಾವನೆಯನ್ನು ಸ್ವೀಕರಿಸಬಾರದು.–** ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ, ಶಾಸನಗಳ ಅಥವಾ ಅವರ ಸಂಬಳಗಳು, ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಇತರ ಆದೇಶಗಳಲ್ಲಿ ಉಪಬಂಧಿಸಬಹುದಾದುದನ್ನು ಹೊರತುಪಡಿಸಿ, ವಿಶ್ವವಿದ್ಯಾನಿಲಯದ ಯಾವುದೇ ಕೆಲಸಕ್ಕೆ ಅವರಿಗೆ ಯಾವುದೇ ಸಂಭಾವನೆಯನ್ನು ಕೊಡತಕ್ಕದ್ದಲ್ಲ ಅಥವಾ ಅವರು ಸ್ವೀಕರಿಸತಕ್ಕದ್ದಲ್ಲ.

**23. ಇತರ ಅಧಿಕಾರಗಳು.–** 9ನೇ ಪ್ರಕರಣದ (14)ನೇ ಖಂಡದಲ್ಲಿ ಉಲ್ಲೇಖಿಸಿದ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ -IV

## ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು

**24. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು.–** ಈ ಕೆಳಕಂಡವು ವಿಶ್ವವಿದ್ಯಾನಿಲಯದ ಪ್ರಾಧಿಕಾರ ಗಳಾಗಿರತಕ್ಕದ್ದು, ಎಂದರೆ:–

(1) ಆಡಳಿತ ಮಂಡಳಿಯ ಸದಸ್ಯರ ಮಂಡಳಿ.

(2) ಶೈಕ್ಷಣಿಕ ಪರಿಷತ್ತು.

[1][(3) ಹಣಕಾಸು ಸಮಿತಿ][1]

[2][(4)][2] ಅಧ್ಯಯನಗಳ ಮಂಡಳಿ, ಮತ್ತು

[2][(5)][2] ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳೆಂದು ಶಾಸನಗಳ ಮೂಲಕ ಘೋಷಿಸ ಬಹುದಾದಂಥ ವಿಶ್ವವಿದ್ಯಾನಿಲಯದ ಇತರ ನಿಕಾಯಗಳು.

1. 1987ರ ಅಧಿನಿಯಮ 40ರ ಮೂಲಕ 31.12.1987ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1987ರ ಅಧಿನಿಯಮ 40ರ ಮೂಲಕ 31.12.1987ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.

**25. ಮಂಡಳಿಯ ರಚನೆ.–** (1) ಕುಲಪತಿಯು, 12ನೇ ಪ್ರಕರಣದ (2)ನೇ ಉಪ–ಪ್ರಕರಣದ ಎರಡನೇ ಪರಂತುಕದ ಮೇರೆಗೆ ಮೊದಲ ಉಪ–ಕುಲಪತಿಯು ನೇಮಕವಾದ ನಂತರ, ಆದಷ್ಟು ಬೇಗನೆ ಮಂಡಳಿಯನ್ನು ರಚಿಸಲು ಕ್ರಮ ಕೈಗೊಳ್ಳತಕ್ಕದ್ದು.

[1][(2) ಮಂಡಳಿಯು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

### (ಎ) ಪದನಿಮಿತ್ತ ಸದಸ್ಯರು

(i) ಉಪ–ಕುಲಪತಿ;

(ii) ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ, ಆತನು ನಾಮನಿರ್ದೇಶಿಸಿದ ವ್ಯಕ್ತಿ;

(iii) ಕರ್ನಾಟಕ ಸರ್ಕಾರದ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ, ಆತನು ನಾಮನಿರ್ದೇಶಿಸಿದ ವ್ಯಕ್ತಿ;

(iv) ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ, ಆತನು ನಾಮನಿರ್ದೇಶಿಸಿದ ವ್ಯಕ್ತಿ;

(v) ಕರ್ನಾಟಕ ಸರ್ಕಾರದ ಪಶುಸಂಗೋಪನೆ, ಮೀನುಗಾರಿಕೆ ಮತ್ತು ಅರಣ್ಯ ಇಲಾಖೆಯ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ, ಆತನು ನಾಮನಿರ್ದೇಶಿಸಿದ ವ್ಯಕ್ತಿ;

(vi) ವಿಶ್ವವಿದ್ಯಾನಿಲಯದ ಡೀನ್;

**(ಬಿ) ಇತರ ಸದಸ್ಯರುಗಳು**

(i) ಸರ್ಕಾರಿ ನೌಕರರಾಗಿರದ ಅಥವಾ ವಿಶ್ವವಿದ್ಯಾನಿಲಯದ ನೌಕರರಾಗಿರದ ಪ್ರಗತಿಪರ ರೈತರ ಪೈಕಿ ಕುಲಪತಿಯು ನಾಮನಿರ್ದೇಶಿಸಿದ ಇಬ್ಬರು ವ್ಯಕ್ತಿಗಳು;

(ii) ಸರ್ಕಾರಿ ನೌಕರರಾಗಿರದ ಅಥವಾ ವಿಶ್ವವಿದ್ಯಾನಿಲಯದ ನೌಕರರಾಗಿರದ ಕೃಷಿ ಶಿಕ್ಷಣದಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿಗಳ ಪೈಕಿ ರಾಜ್ಯಸರ್ಕಾರವು ನಾಮನಿರ್ದೇಶಿಸಿದ ಇಬ್ಬರು ವ್ಯಕ್ತಿಗಳು;

(iii) ಸರ್ಕಾರಿ ನೌಕರನಾಗಿರದ ಅಥವಾ ವಿಶ್ವವಿದ್ಯಾನಿಲಯದ ನೌಕರನಾಗಿರದ, ವಿಶ್ವವಿದ್ಯಾನಿಲಯದ, ಐದು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯ ನೋಂದಾಯಿತ ಪದವೀಧರರ ಪೈಕಿ ರಾಜ್ಯಸರ್ಕಾರವು ನಾಮನಿರ್ದೇಶಿಸಿದ ಒಬ್ಬ ವ್ಯಕ್ತಿ;

(iv) ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ನಾಮನಿರ್ದೇಶಿಸಿದ ವ್ಯಕ್ತಿ;

(v) ಕುಲಪತಿಯು ನಾಮನಿರ್ದೇಶಿಸಿದ, ವಿಶೇಷವಾಗಿ ಗ್ರಾಮೀಣ ಅಭ್ಯುದಯದ ಹಿನ್ನೆಲೆ ಹೊಂದಿರುವ ಒಬ್ಬ ಖ್ಯಾತ ಮಹಿಳಾ ಸಮಾಜ ಕಾರ್ಯಕರ್ತೆ

– ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರನು ಮಂಡಳಿಯ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು.][1]

1. 1987ರ ಅಧಿನಿಯಮ 40ರ ಮೂಲಕ 31.12.1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಮಂಡಳಿಯ ಸದಸ್ಯರ ಅಧಿಕಾರಾವಧಿಯು ಮೂರು ವರ್ಷಗಳಾಗಿರತಕ್ಕದ್ದು:

ಪರಂತು, ಆಕಸ್ಮಿಕವಾಗಿ ಖಾಲಿಯಾದ ಸ್ಥಾನವನ್ನು ಭರ್ತಿಮಾಡಲು ನಾಮನಿರ್ದೇಶಿತನಾದ ಯಾವನೇ ಸದಸ್ಯನ ಪದಾವಧಿಯು, ಆತನ ಪೂರ್ವಾಧಿಕಾರಿಯ ಉಳಿದ ಅವಧಿಯಾಗಿರತಕ್ಕದ್ದು.

(4) ಮಂಡಳಿಯ ಸಭೆಗೆ ಕೋರಂ ಆಗಲು ಮಂಡಳಿಯ ಆರು ಮಂದಿ ಸದಸ್ಯರು ಇರತಕ್ಕದ್ದು.

(5) ಮಂಡಳಿಯ ಸದಸ್ಯರು, ಗೊತ್ತುಪಡಿಸಬಹುದಾದಂಥ ದಿನಭತ್ಯ ಹಾಗೂ ಪ್ರಯಾಣ ಭತ್ಯಗಳ ಹೊರತು ವಿಶ್ವವಿದ್ಯಾನಿಲಯದಿಂದ ಯಾವುದೇ ಸಂಭಾವನೆಯನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

**26. ಮಂಡಳಿಯ ಅಧಿಕಾರಗಳು ಮತ್ತು ಕರ್ತವ್ಯಗಳು.–** ಮಂಡಳಿಯು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಉಪಕುಲಪತಿಯು ಸಲ್ಲಿಸಿದ ವಿಶ್ವವಿದ್ಯಾನಿಲಯದ ಹಣಕಾಸು ಅಂದಾಜುಗಳನ್ನು ಅನುಮೋದಿಸುವುದು;

(ಬಿ) ವಿಶ್ವವಿದ್ಯಾನಿಲಯದ ಆಸ್ತಿಗಳನ್ನು ಮತ್ತು ನಿಧಿಗಳನ್ನು ಹೊಂದಿರುವುದು ಮತ್ತು ನಿಯಂತ್ರಿಸುವುದು ಮತ್ತು ವಿಶ್ವವಿದ್ಯಾನಿಲಯದ ಪರವಾಗಿ ಯಾವುದೇ ಸಾಮಾನ್ಯ ಅಥವಾ ವಿಶೇಷ ಸೂಚನೆಗಳನ್ನು ನೀಡುವುದು;

(ಸಿ) ವಿಶ್ವವಿದ್ಯಾನಿಲಯದ ಪರವಾಗಿ ಯಾವುದೇ ಚರ ಅಥವಾ ಸ್ಥಿರ ಆಸ್ತಿಯ ವರ್ಗಾವಣೆಯನ್ನು ಒಪ್ಪುವುದು ಮತ್ತು ವಿಲೆ ಮಾಡುವುದು;

(ಡಿ) ನಿರ್ದಿಷ್ಟ ಉದ್ದೇಶಗಳಿಗಾಗಿ ವಿಶ್ವವಿದ್ಯಾನಿಲಯದ ವಶಕ್ಕೆ ಒಪ್ಪಿಸಲಾದ ಮತ್ತು ಅದು ಸ್ವೀಕರಿಸಿದ ಸರ್ಕಾರಿ ಮತ್ತು ಖಾಸಗಿ ನಿಧಿಗಳನ್ನು ನಿರ್ವಹಿಸುವುದು;

(ಇ) ಗೊತ್ತುಪಡಿಸಿದ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು, ಅಧ್ಯಾಪಕರುಗಳನ್ನು ಮತ್ತು ಇತರ ನೌಕರರನ್ನು ನೇಮಕ ಮಾಡುವುದು ಮತ್ತು ಉಪಕುಲಪತಿಯು ಮಾಡಿದ ನೇಮಕಗಳನ್ನು ಅನುಮೋದಿಸುವುದು;

(ಎಫ್) ವಿಶ್ವವಿದ್ಯಾನಿಲಯಕ್ಕೆ ಸೇರಿದ ಹಣವನ್ನು ಹೂಡುವುದು;

(ಜಿ) ವಿಶ್ವವಿದ್ಯಾನಿಲಯದ ಸಾಮಾನ್ಯ ಮೊಹರಿನ ನಮೂನೆಯನ್ನು ಮತ್ತು ಅದನ್ನು ಬಳಸುವ ರೀತಿಯನ್ನು ನಿರ್ದೇಶಿಸುವುದು;

(ಎಚ್) ಮಂಡಲಿಯ ಸಮರ್ಪಕ ಕಾರ್ಯನಿರ್ವಹಣೆಗಾಗಿ ಅವಶ್ಯವೆಂದು ಭಾವಿಸಬಹುದಾದಂಥ ಸಮಿತಿಗಳನ್ನು, ಅವು ಸ್ಥಾಯಿಯಾಗಿರಲಿ ಅಥವಾ ತಾತ್ಕಾಲಿಕವಾಗಿರಲಿ ನೇಮಕ ಮಾಡುವುದು;

(ಐ) ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ರಾಜ್ಯಸರ್ಕಾರದ ಅನುಮೋದನೆಯೊಂದಿಗೆ ವಿಶ್ವವಿದ್ಯಾನಿಲಯದ ಸ್ವತ್ತಿನ ಭದ್ರತೆಯ ಮೇಲೆ ಅಥವಾ ಅನ್ಯಥಾ ಹಣ ಸಾಲ ತೆಗೆದುಕೊಳ್ಳುವುದು;

(ಜೆ) ಮಂಡಳಿಯು ಅವಶ್ಯವೆಂದು ಭಾವಿಸಬಹುದಾದಂಥ ಕಾಲದಲ್ಲಿ ಮತ್ತು ಅಂಥ ಸ್ಥಳದಲ್ಲಿ ಸಭೆ ಸೇರುವುದು. ಆದರೆ, ಒಂದು ಸಾಮಾನ್ಯ ಸಭೆಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ನಡೆಸತಕ್ಕದ್ದು ಮತ್ತು ಕೊನೆಯ ಪಕ್ಷ ಅದರ ಸಾಮಾನ್ಯ ಸಭೆಗಳ ಅರ್ಧದಷ್ಟು ಸಂಖ್ಯೆಯ ಸಭೆಗಳನ್ನು ವಿಶ್ವವಿದ್ಯಾನಿಲಯದ ಕೇಂದ್ರ ಸ್ಥಳದಲ್ಲೇ ನಡೆಸತಕ್ಕದ್ದು; ಮತ್ತು

(ಕೆ) ಈ ಅಧಿನಿಯಮದ ಮತ್ತು ಶಾಸನಗಳ ಅನುಸಾರವಾಗಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ನಿಯಂತ್ರಿಸುವುದು ಮತ್ತು ನಿರ್ಧರಿಸುವುದು ಮತ್ತು ಈ ಅಧಿನಿಯಮದ ಮತ್ತು ಶಾಸನಗಳ ಮೂಲಕ ಅದಕ್ಕೆ ಪ್ರದತ್ತಗೊಳಿಸಬಹುದಾದಂಥ ಅಥವಾ ಅದಕ್ಕೆ ವಿಧಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**27. ಶೈಕ್ಷಣಿಕ ಪರಿಷತ್ತು.–** (1) ಶೈಕ್ಷಣಿಕ ಪರಿಷತ್ತು ವಿಶ್ವವಿದ್ಯಾನಿಲಯದ ಶೈಕ್ಷಣಿಕ ವ್ಯವಹಾರಗಳ ಪ್ರಭಾರದಲ್ಲಿರತಕ್ಕದ್ದು ಮತ್ತು ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು ಶಿಕ್ಷಣದ, ವಿದ್ಯಾಭ್ಯಾಸದ ಮತ್ತು ಪರೀಕ್ಷೆಗಳ ಗುಣಮಟ್ಟವನ್ನು ಕಾಪಾಡಿಕೊಂಡು ಬರುವುದಕ್ಕೆ ಮತ್ತು ಪದವಿಗಳನ್ನು ಪ್ರದಾನ ಮಾಡುವುದಕ್ಕೆ ಅಥವಾ ಡಿಪ್ಲೋಮಾ ನೀಡಿಕೆಗೆ ಸಂಬಂಧಪಟ್ಟ ಇತರ ವಿಷಯಗಳ ಬಗ್ಗೆ ಮೇಲ್ವಿಚಾರಣೆ ಮಾಡತಕ್ಕದ್ದು, ನಿರ್ದೇಶಿಸತಕ್ಕದ್ದು ಮತ್ತು ನಿಯಂತ್ರಿಸತಕ್ಕದ್ದು ಮತ್ತು ಅವುಗಳಿಗೆ ಜವಾಬ್ದಾರಿಯಾಗಿರತಕ್ಕದ್ದು ಹಾಗೂ ಶಾಸನಗಳ ಮೂಲಕ ಅದಕ್ಕೆ ಪ್ರದತ್ತಗೊಳಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಅಥವಾ ಅದಕ್ಕೆ ವಿಧಿಸಬಹುದಾದಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(2) ಅದು ಎಲ್ಲ ಶೈಕ್ಷಣಿಕ ವಿಷಯಗಳ ಬಗ್ಗೆ ಉಪಕುಲಪತಿಗೆ ಸಲಹೆ ನೀಡುವ ಹಕ್ಕನ್ನು ಹೊಂದಿರತಕ್ಕದ್ದು.

(3) ಶೈಕ್ಷಣಿಕ ಪರಿಷತ್ತು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡರತಕ್ಕದ್ದು, ಎಂದರೆ:–

(ಎ) ಉಪ–ಕುಲಪತಿ.

(ಬಿ) ಡೀನ್.

[1][(ಸಿ) ಶಿಕ್ಷಣ ನಿರ್ದೇಶಕರು][1].

1. 1986ರ ಅಧಿನಿಯಮ 14ರ ಮೂಲಕ 1.10.1986ರಿಂದ ಜಾರಿಗೆ ಬರುವಂತೆ (ಸಿ), (ಡಿ) ಮತ್ತು (ಇ) ಖಂಡಗಳಿಗೆ ಬದಲಾಗಿ (ಸಿ) ಖಂಡವನ್ನು ಪ್ರತಿಯೋಜಿಸಲಾಗಿದೆ.

(ಎಫ್) ಸಂಶೋಧನಾ ನಿರ್ದೇಶಕರು.

(ಜಿ) ವಿಸ್ತರಣಾ ನಿರ್ದೇಶಕರು.

(ಎಚ್) ವಿಭಾಗಗಳ ಮುಖ್ಯಸ್ಥರು.

**28. ಶೈಕ್ಷಣಿಕ ಪರಿಷತ್ತಿನ ಅಧಿಕಾರಗಳು.–** (1) ಶೈಕ್ಷಣಿಕ ಪರಿಷತ್ತು, ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು, ವಿನಿಯಮನಗಳ ಮೂಲಕ, ಎಲ್ಲ ವ್ಯಾಸಂಗ ವಿಷಯಗಳನ್ನು ನಿಗದಿಪಡಿಸುವ ಮತ್ತು ಪಠ್ಯಕ್ರಮಗಳನ್ನು ನಿರ್ಣಯಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದಲ್ಲಿ ಬೋಧನೆಯ, ಸಂಶೋಧನೆಯ ಮತ್ತು ವಿಸ್ತರಣಾ ಶಿಕ್ಷಣದ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ಅವುಗಳ ಗುಣಮಟ್ಟಗಳನ್ನು ಕಾಯ್ದುಕೊಳ್ಳಲು ಜವಾಬ್ದಾರಿ ಹೊಂದಿರತಕ್ಕದ್ದು. ಪರಿಷತ್ತು ತನ್ನ ನಿಯಂತ್ರಣಕ್ಕೊಳಪಟ್ಟ ಎಲ್ಲ ವಿಷಯಗಳಿಗೆ ಸಂಬಂಧಪಟ್ಟಂತೆ, ಈ ಅಧಿನಿಯಮಕ್ಕೆ ಮತ್ತು ಶಾಸನಗಳಿಗೆ ಸುಸಂಗತವಾದ ವಿನಿಯಮನಗಳನ್ನು ರಚಿಸಲು ಮತ್ತು ಅಂಥ ವಿನಿಯಮನಗಳನ್ನು ತಿದ್ದುಪಡಿ ಮಾಡಲು ಅಥವಾ ನಿರಸನಗೊಳಿಸಲು ಅಧಿಕಾರ ಹೊಂದಿರತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಶೈಕ್ಷಣಿಕ ಪರಿಷತ್ತು ಈ ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕದ್ದು,–

(ಎ) ಗ್ರಂಥಾಲಯಗಳ ನಿಯಂತ್ರಣ ಮತ್ತು ನಿರ್ವಹಣೆಯನ್ನು ಒಳಗೊಂಡಂತೆ ಎಲ್ಲ ಶೈಕ್ಷಣಿಕ ವಿಷಯಗಳ ಮೇಲೆ ಮಂಡಳಿಗೆ ಸಲಹೆ ನೀಡುವುದು;

(ಬಿ) ಪ್ರಾಧ್ಯಾಪಕರ, ಸಹ ಪ್ರಾಧ್ಯಾಪಕರ, ರೀಡರುಗಳ ಮತ್ತು ಅಧ್ಯಾಪಕರ ಮತ್ತು ಇತರ ಬೋಧಕ ಹುದ್ದೆಗಳನ್ನು ಸ್ಥಾಪಿಸಲು ಮತ್ತು ಅವರ ಕರ್ತವ್ಯಗಳ ಮತ್ತು ವೇತನ, ಇತ್ಯಾದಿಗಳ ಸಂಬಂಧದಲ್ಲಿ ಶಿಫಾರಸು ಮಾಡುವುದು;

(ಸಿ) ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ವಿಭಾಗಗಳನ್ನು ರಚಿಸುವುದಕ್ಕೆ ಅಥವಾ ಪುನರ್‌ರಚಿಸುವುದಕ್ಕೆ ಸಂಬಂಧಿಸಿದಂತೆ ಯೋಜನೆಗಳನ್ನು ರೂಪಿಸುವುದು, ಮಾರ್ಪಾಟು ಮಾಡುವುದು ಅಥವಾ ಪರಿಷ್ಕರಿಸುವುದು;

(ಡಿ) ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಪಟ್ಟಂತೆ ವಿನಿಯಮನಗಳನ್ನು ರಚಿಸುವುದು;

(ಇ) ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷೆಗಳಿಗೆ ಮತ್ತು ಅಂಥ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಪ್ರವೇಶ ಪಡೆಯುವುದಕ್ಕೆ ಸಂಬಂಧಿಸಿದ ಷರತ್ತುಗಳ ಬಗ್ಗೆ ವಿನಿಯಮನಗಳನ್ನು ರಚಿಸುವುದು;

(ಎಫ್) ಪದವಿಗಳನ್ನು, ಡಿಪ್ಲೋಮಾಗಳನ್ನು ಮತ್ತು ಪ್ರಮಾಣಪತ್ರಗಳನ್ನು ನೀಡಲು ಅನುವು ಮಾಡಿಕೊಡುವ ವ್ಯಾಸಂಗ ಕ್ರಮಗಳಿಗೆ ಸಂಬಂಧಿಸಿದಂತೆ ವಿನಿಯಮನಗಳನ್ನು ರಚಿಸುವುದು;

(ಜಿ) ಸ್ನಾತಕೋತ್ತರ ಬೋಧನೆಯ, ಸಂಶೋಧನೆಯ ಮತ್ತು ವಿಸ್ತರಣಾ ಶಿಕ್ಷಣದ ಸಂಬಂಧದಲ್ಲಿ ಶಿಫಾರಸುಗಳನ್ನು ಮಾಡುವುದು;

(ಎಚ್) ವಿಶ್ವವಿದ್ಯಾನಿಲಯದಲ್ಲಿನ ಅಧ್ಯಾಪಕರಿಗೆ ಗೊತ್ತುಪಡಿಸಬೇಕಾದ ಅರ್ಹತೆಗಳ ಸಂಬಂಧದಲ್ಲಿ ಶಿಫಾರಸುಗಳನ್ನು ಮಾಡುವುದು;

(ಐ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಅಡಿಯಲ್ಲಿ ಅದಕ್ಕೆ ಪ್ರದತ್ತಗೊಳಿಸಬಹುದಾದಂಥ ಅಥವಾ ವಿಧಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು;

[1][28ಎ. **ಹಣಕಾಸು ಸಮಿತಿ.–** (1) ಈ ಕೆಳಕಂಡಂತೆ ಸದಸ್ಯರುಗಳನ್ನೊಳಗೊಂಡ ಒಂದು ಹಣಕಾಸು ಸಮಿತಿ ಇರತಕ್ಕದ್ದು, ಎಂದರೆ:–

(i) ಉಪಕುಲಪತಿ, ಪದನಿಮಿತ್ತ ಅಧ್ಯಕ್ಷ;

(ii) ಮಂಡಳಿಯು, ಅದರ ಸದಸ್ಯರ ಪೈಕಿ ನಾಮನಿರ್ದೇಶನ ಮಾಡಿದ ಇಬ್ಬರು ವ್ಯಕ್ತಿಗಳು;

(iii) ಕರ್ನಾಟಕ ಸರ್ಕಾರದ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ, ಆತನು ಅವನ ನಾಮನಿರ್ದೇಶಿದ ವ್ಯಕ್ತಿ;

(iv) ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವನ ನಾಮನಿರ್ದೇಶಿದ ವ್ಯಕ್ತಿ;

ವಿಶ್ವವಿದ್ಯಾನಿಲಯದ ಲೆಕ್ಕ ನಿಯಂತ್ರಕರು, ಸಮಿತಿಯ ಪದನಿಮಿತ್ತ ಕಾರ್ಯದರ್ಶಿ ಆಗಿರತಕ್ಕದ್ದು.

(2) ಹಣಕಾಸು ಸಮಿತಿಯು ಈ ಕೆಳಕಂಡ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(i) ವಾರ್ಷಿಕ ಆಯವ್ಯಯ ಅಂದಾಜುಗಳನ್ನು ಪರಿಶೀಲಿಸುವುದು ಮತ್ತು ಮಂಡಳಿಗೆ ತನ್ನ ಶಿಫಾರಸುಗಳನ್ನು ಮಾಡುವುದು;

(ii) ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಸಾಮಾನ್ಯ ಪರಿಶೀಲನೆಯನ್ನು ಮಾಡುವುದು, ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳನ್ನು ಪುನರವಲೋಕಿಸುವುದು ಮತ್ತು ಅದರ ಮೇಲೆ ತನ್ನ ಶಿಫಾರಸುಗಳನ್ನು ಮಾಡುವುದು;

(iii) ಆಯವ್ಯಯದಲ್ಲಿ ಯಾವ ವೆಚ್ಚವನ್ನು ಒದಗಿಸಿಲ್ಲವೋ ಆ ವೆಚ್ಚವನ್ನು ಒಳಗೊಂಡ ಅಥವಾ ಆಯವ್ಯಯದಲ್ಲಿ ಒದಗಿಸಿದ ಮೊತ್ತಕ್ಕಿಂತ ಹೆಚ್ಚುವರಿ ವೆಚ್ಚವನ್ನು ಒಳಗೊಂಡ ವಿಶ್ವವಿದ್ಯಾನಿಲಯದ ಎಲ್ಲ ಪ್ರಸ್ತಾವಗಳನ್ನು ಪರಿಶೀಲಿಸುವುದು;

(iv) ಶಾಸನಗಳ ಮೂಲಕ ಗೊತ್ತುಪಡಿಸಬಹುದಾದಂಥ ಇತರ ಪ್ರಕಾರ್ಯಗಳು.

(3) ಹಿಂದೆ ಹೇಳಿದ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಉಪ–ಕುಲಪತಿಯು, ತುರ್ತು ಸಂದರ್ಭಗಳಲ್ಲಿ ಮತ್ತು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಹಣಕಾಸು ಸಮಿತಿಯ ಗಮನಕ್ಕೆ ತರದೆಯೇ ಆಯವ್ಯಯದಲ್ಲಿ ಒದಗಿಸಿಲ್ಲದ ಅಥವಾ ಒದಗಿಸಿದ ಹಣಕ್ಕಿಂತ ಹೆಚ್ಚುವರಿಯಾಗಿ ಯಾವುದೇ ಒಂದು ಸಂದರ್ಭದಲ್ಲಿ ಹತ್ತುಸಾವಿರ ರೂಪಾಯಿಗಳನ್ನು ಮೀರದ ಯಾವುದೇ ವೆಚ್ಚವನ್ನು ಭರಿಸಬಹುದು. ಆದರೆ, ಅಂಥ ವೆಚ್ಚದ ಬಗ್ಗೆ ಹಣಕಾಸು ಸಮಿತಿಯ ಮುಂದಿನ ಮೊದಲ ಸಭೆಯಲ್ಲಿ ವರದಿ ಮಾಡತಕ್ಕದ್ದು.][1]

1. 1987ರ ಅಧಿನಿಯಮ 40ರ ಮೂಲಕ ದಿನಾಂಕ 31.12.1987ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**29. ಅಧ್ಯಯನ ಮಂಡಳಿಗಳು.–** ಬೋಧನೆಯ ಪ್ರತಿಯೊಂದು ವಿಭಾಗಕ್ಕೆ ಒಂದು ಅಧ್ಯಯನ ಮಂಡಳಿ ಇರತಕ್ಕದ್ದು. ಅಧ್ಯಯನ ಮಂಡಳಿಯ ರಚನೆಯನ್ನು ಮತ್ತು ಅಧಿಕಾರಗಳನ್ನು ಶಾಸನಗಳ ಮೂಲಕ ಗೊತ್ತುಪಡಿಸತಕ್ಕದ್ದು.

## ಅಧ್ಯಾಯ-V

## ವಿಶ್ವವಿದ್ಯಾನಿಲಯದ ನಿಧಿಗಳು

**30. ಸಾಮಾನ್ಯ ನಿಧಿಗಳು.–** ವಿಶ್ವವಿದ್ಯಾನಿಲಯವು ಸಾಮಾನ್ಯ ನಿಧಿಯೊಂದನ್ನು ಹೊಂದಿರತಕ್ಕದ್ದು, ಮತ್ತು ಆ ನಿಧಿಗೆ,–

(i) ಶುಲ್ಕಗಳಿಂದ, ದತ್ತಿಗಳು ಮತ್ತು ಅನುದಾನಗಳು ಯಾವುವಾದರೂ ಇದ್ದರೆ, ಅವುಗಳಿಂದ ಬರುವ ಆದಾಯಗಳನ್ನು;

(ii) ಸರ್ಕಾರವು ತಾನು ವಿಧಿಸಬಹುದಾದಂಥ ಷರತ್ತುಗಳ ಮೇಲೆ ನೀಡಬಹುದಾದ ವಂತಿಗೆಗಳನ್ನು ಅಥವಾ ಅನುದಾನಗಳನ್ನು;

(iii) ಇತರ ವಂತಿಗೆಗಳನ್ನು, ಸ್ವೀಕೃತಿಗಳನ್ನು, ಅನುದಾನಗಳನ್ನು, ದೇಣಿಗೆಗಳನ್ನು ಮತ್ತು ಧರ್ಮಾರ್ಥ ಧನವನ್ನು

– ಜಮೆ ಮಾಡತಕ್ಕದ್ದು.

**31. ಮೂಲ ನಿಧಿ.–** (1) ವಿಶ್ವವಿದ್ಯಾನಿಲಯವು ಮೂಲ ನಿಧಿಗೆ ಕೇಂದ್ರ ಸರ್ಕಾರವು ಮತ್ತು ರಾಜ್ಯಸರ್ಕಾರವು ನೀಡಿದ ವಂತಿಗೆಗಳು ಮತ್ತು ಅನುದಾನಗಳನ್ನು ಜಮೆ ಮಾಡುವುದಕ್ಕಾಗಿ ಮತ್ತು ಸದರಿ ನಿಧಿಗೆ ಜಮೆ ಮಾಡಬಹುದಾದಂಥ ವಿಶ್ವವಿದ್ಯಾನಿಲಯದ ಅಂಥ ಇತರ ಮೊತ್ತವನ್ನು ಜಮೆ ಮಾಡುವುದಕ್ಕಾಗಿ ಮೂಲ ನಿಧಿ ಎಂದು ಕರೆಯಲಾಗುವ ನಿಧಿಯನ್ನು ರಚಿಸತಕ್ಕದ್ದು.

(2) ಮೂಲ ನಿಧಿಯಲ್ಲಿನ ಎಲ್ಲ ಹಣವನ್ನು ಭಾರತ ನ್ಯಾಸ ಅಧಿನಿಯಮ, 1882ರ 20ನೇ ಪ್ರಕರಣದ (ಎ) ಯಿಂದ (ಡಿ) ಖಂಡದವರೆಗೆ ನಮೂದಿಸಿದ ಅಥವಾ ಉಲ್ಲೇಖಿಸಿದ ಭದ್ರತೆಗಳಲ್ಲಿ ಹೂಡತಕ್ಕದ್ದು.

**32. ನಿವೃತ್ತಿವೇತನ ಮತ್ತು ಭವಿಷ್ಯನಿಧಿಗಳು.–** (1) ವಿಶ್ವವಿದ್ಯಾನಿಲಯವು, ಅದರ ಅಧಿಕಾರಿಗಳ, ಅಧ್ಯಾಪಕರ ಅಥವಾ ನೌಕರರ ಸೌಲಭ್ಯಕ್ಕಾಗಿ ಯಾವುದೇ ನಿವೃತ್ತಿ ವೇತನ ನಿಧಿಯನ್ನು ಅಥವಾ ಭವಿಷ್ಯ ನಿಧಿಯನ್ನು ರಚಿಸಿರುವಲ್ಲಿ, ಅಂಥ ನಿಧಿಗೆ, ಭವಿಷ್ಯ ನಿಧಿಗಳ ಅಧಿನಿಯಮ, 1925ರ (1925ರ ಕೇಂದ್ರಾಧಿನಿಯಮ 19) ಉಪಬಂಧಗಳು, ಅವು ಸರ್ಕಾರಿ ಭವಿಷ್ಯ ನಿಧಿ ಆಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದೆಂದು ರಾಜ್ಯಸರ್ಕಾರವು ಘೋಷಿಸಬಹುದು.

(2) ಸರ್ಕಾರದ ಸೇವೆಗಳಲ್ಲಿರುವ, 7ನೇ ಪ್ರಕರಣದ ಅಡಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಯಾದ ವ್ಯಕ್ತಿಗಳು [1][ಕರ್ನಾಟಕ][1] ರಾಜ್ಯಸರ್ಕಾರಿ ಸೇವಾ ನಿಯಮಗಳ ಅಥವಾ ವರ್ಗಾವಣೆಯ ನಿಕಟಪೂರ್ವದಲ್ಲಿ ಅವರಿಗೆ ಅನ್ವಯವಾಗುತ್ತಿದ್ದಂಥ ಇತರ ನಿಯಮಗಳ ಅಡಿಯಲ್ಲಿ ನಿವೃತ್ತಿವೇತನಕ್ಕೆ ಹಕ್ಕುಳ್ಳವರಾಗತಕ್ಕದ್ದು ಮತ್ತು ಅಂಥ ನಿವೃತ್ತಿವೇತನವನ್ನು ರಾಜ್ಯಸರ್ಕಾರವು ಸಂದಾಯ ಮಾಡತಕ್ಕದ್ದು ಮತ್ತು ಅದು ರಾಜ್ಯ ಸಂಚಿತ ನಿಧಿಯಿಂದ ಭರಿಸತಕ್ಕ ವೆಚ್ಚವಾಗಿರತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ ದಿನಾಂಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**33. ಇತರ ನಿಧಿಗಳು.–** ವಿಶ್ವವಿದ್ಯಾನಿಲಯವು, ಶಾಸನಗಳ ಮೂಲಕ ಗೊತ್ತುಪಡಿಸ ಬಹುದಾದಂಥ ಇತರ ನಿಧಿಗಳನ್ನು ಹೊಂದಿರಬಹುದು.

**34. ನಿಧಿಗಳ ನಿರ್ವಹಣೆ.–** ವಿಶ್ವವಿದ್ಯಾನಿಲಯದ ಸಾಮಾನ್ಯ ನಿದಿಯನ್ನು, ಮೂಲ ನಿಧಿಯನ್ನು ಮತ್ತು ಇತರ ನಿಧಿಗಳನ್ನು ಶಾಸನಗಳಲ್ಲಿ ವಿಧಿಸಿದ ಉಪಬಂಧಗಳಿಗೆ ಅನುಸಾರ ನಿರ್ವಹಿಸತಕ್ಕದ್ದು.

**35. ಸರ್ಕಾರದ ಅನುದಾನಗಳು.–** (1) ರಾಜ್ಯಸರ್ಕಾರವು, ಪ್ರತಿ ವರ್ಷ, ವಿಶ್ವವಿದ್ಯಾನಿಲಯಕ್ಕೆ ಈ ಕೆಳಕಂಡಂತೆ, ರದ್ದಾಗದಿರುವಂಥ ಒಂದೇ ಗಂಟಿನಲ್ಲಿ ಅನುದಾನಗಳನ್ನು ನೀಡತಕ್ಕದ್ದು:–

(i) ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲಾದಂಥ ಕೃಷಿ, ಪಶುಸಂಗೋಪನೆ ಮತ್ತು ಸರ್ಕಾರದ ಇತರ ಇಲಾಖೆಗಳ ಅಂಥ ಕಾರ್ಯಚಟುವಟಿಕೆಗಳಿಗೆ ಮತ್ತು ಸಂಸ್ಥೆಗಳಿಗೆ 1961-62ನೇ ಸಾಲಿನಲ್ಲಿ ಭರಿಸಲಾದ ನಿವ್ವಳ ವೆಚ್ಚಕ್ಕಿಂತ ಕಡಿಮೆಯಲ್ಲದ ಅನುದಾನ;

(ii) (i)ನೇ ಖಂಡದಲ್ಲಿ ಉಲ್ಲೇಖಿಸಿದ ಕಾರ್ಯಚಟುವಟಿಕೆಗಳಿಗೆ ಮತ್ತು ಸಂಸ್ಥೆಗಳಿಗೆ ಸಂಬಂಧಪಟ್ಟವುಗಳನ್ನು ಹೊರತುಪಡಿಸಿ, ವಿಶ್ವವಿದ್ಯಾನಿಲಯದ ಸಿಬ್ಬಂದಿಯ ವೇತನಕ್ಕೆ ಮತ್ತು ಭತ್ಯಗಳಿಗೆ, ಸಾದಿಲ್ವಾರಿಗೆ, ಸರಬರಾಜುಗಳಿಗೆ ಮತ್ತು ಸೇವೆಗಳ ಅಂದಾಜು ಮಾಡಿದ ನಿವ್ವಳ ವೆಚ್ಚಕ್ಕಿಂತ ಕಡಿಮೆಯಲ್ಲದ ಅನುದಾನ;

(iii) ವಿಶ್ವವಿದ್ಯಾನಿಲಯದ ಸಮರ್ಪಕ ಕಾರ್ಯನಿರ್ವಹಣೆಗಾಗಿ ರಾಜ್ಯಸರ್ಕಾರವು ಅವಶ್ಯವೆಂದು ಪರಿಗಣಿಸಬಹುದಾದಂಥ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳ ಹೆಚ್ಚುವರಿ ಬಾಬುಗಳ ಖರ್ಚುಗಳನ್ನು ಭರಿಸಲು ಅನುದಾನ;

(2) ರಾಜ್ಯ ಸರ್ಕಾರವು, ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ ಮತ್ತು ವಿಶ್ವವಿದ್ಯಾನಿಲಯವು ಅನುಷ್ಠಾನಗೊಳಿಸಲು ವರ್ಗಾವಣೆ ಮಾಡಿದ ಯೋಜನೆಗಳ ಸಂಬಂಧದಲ್ಲಿ, ವಾರ್ಷಿಕ ಯೋಜನೆಯಲ್ಲಿ ಕಾಣಿಸಿರುವಂತೆ ಅಂಥ ಯೋಜನೆಗಳನ್ನು ಪುರಸ್ಕರಿಸುವ ಕೇಂದ್ರ ಸರ್ಕಾರದ ಮತ್ತು ಇತರ ಏಜೆನ್ಸಿಗಳ ನಿರೀಕ್ಷಿತ ನೆರವನ್ನು ಕಡಿತ ಮಾಡಿದ ತರುವಾಯ, ವಿಶ್ವವಿದ್ಯಾನಿಲಯದ ನಿವ್ವಳ ವೆಚ್ಚಕ್ಕೆ ಸಮಾನವಾದ ರದ್ದಾಗದಿರುವ ಒಂದೇ ಗಂಟಿನ ಅನುದಾನವನ್ನೂ ಸಹ ನೀಡತಕ್ಕದ್ದು.

(3) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ವಿಶ್ವವಿದ್ಯಾನಿಲಯದ ಸ್ಥಾಪನೆಯ ತರುವಾಯ ಏಳನೇ ಹಣಕಾಸು ವರ್ಷದಿಂದ ಜಾರಿಗೆ ಬರುವಂತೆ, (1)ನೇ ಉಪ-ಪ್ರಕರಣದ (i) ಮತ್ತು (ii)ನೇ ಖಂಡಗಳಲ್ಲಿ ಉಲ್ಲೇಖಿಸಿದ ಕಾರ್ಯಚಟುವಟಿಕೆಗಳಿಗೆ, ಸಂಸ್ಥೆಗಳಿಗೆ, ಸಿಬ್ಬಂದಿಗೆ, ಸಾದಿಲ್ವಾರುಗಳಿಗೆ, ಸರಬರಾಜುಗಳಿಗೆ ಮತ್ತು ಸೇವೆಗಳಿಗೆ ಸಂಬಂಧಿಸಿ, ಅಂಥ ಕಾರ್ಯಚಟುವಟಿಕೆಗಳು ಮತ್ತು ಸಂಸ್ಥೆಗಳು, ಸಿಬ್ಬಂದಿ, ಸರಬರಾಜು ಮತ್ತು ಸೇವೆಗಳ ಸಂಬಂಧದಲ್ಲಿ ಹಿಂದಿನ ಮೂರು ವರ್ಷಗಳ ಅವಧಿಯಲ್ಲಿ ಮಾಡಿದ ವಾಸ್ತವಿಕ ವೆಚ್ಚದ ಸರಾಸರಿ ಮೊತ್ತಕ್ಕಿಂತ ಕಡಿಮೆಯಲ್ಲದ ಮೊತ್ತವನ್ನು ಪ್ರತಿವರ್ಷ ವಿಶ್ವವಿದ್ಯಾನಿಲಯಕ್ಕೆ ರದ್ದಾಗದಿರುವ ಒಂದೇ ಗಂಟಿನ ಅನುದಾನವನ್ನು ಸಂದಾಯಮಾಡತಕ್ಕದ್ದು:

ಪರಂತು, ವಿಶ್ವವಿದ್ಯಾನಿಲಯವು ಯಾವುದೇ ಹಣಕಾಸು ವರ್ಷದಲ್ಲಿ, ಏಪ್ರಿಲ್ ಮೊದಲ ದಿನದ ತರುವಾಯ ಯಾವುದೇ ದಿನಾಂಕದಿಂದ ಕಾರ್ಯಾರಂಭ ಮಾಡಿದರೆ, (i) ಮತ್ತು (ii)ನೇ ಖಂಡಗಳ ಅಡಿಯಲ್ಲಿನ ಅನುದಾನಗಳನ್ನು, ಆ ಹಣಕಾಸು ವರ್ಷದ ಉಳಿದ ಅವಧಿಗಾಗಿ ವಿಶ್ವವಿದ್ಯಾನಿಲಯವು ಮಾಡಬೇಕಾದ ವೆಚ್ಚವನ್ನು ಪರಿಗಣನೆಗೆ ತೆಗೆದುಕೊಂಡು, ನಿಗದಿಪಡಿಸತಕ್ಕದ್ದು.

(4) ರಾಜ್ಯ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವ ಮೊದಲು ಅದು ಅಗತ್ಯಪಡಿಸಬಹುದಾದಂಥ ವಿವರಪತ್ರಗಳನ್ನು, ಲೆಕ್ಕಪತ್ರಗಳನ್ನು, ವರದಿಗಳನ್ನು ಮತ್ತು ಇತರ ವಿವರಗಳನ್ನು ವಿಶ್ವವಿದ್ಯಾನಿಲಯವು ಒದಗಿಸತಕ್ಕದ್ದು ಮತ್ತು ರಾಜ್ಯಸರ್ಕಾರವು ನಿರ್ದೇಶಿಸಬಹುದಾದಂಥ ಕಾಲದೊಳಗೆ ಯಾವುದೇ ಅನುದಾನದ ಬಳಕೆಗೆ ಸಂಬಂಧಪಟ್ಟಂತೆ ಕ್ರಮ ಕೈಗೊಳ್ಳತಕ್ಕದ್ದು ಮತ್ತು ವಿವರ ಪತ್ರಗಳನ್ನು, ಲೆಕ್ಕಪತ್ರಗಳನ್ನು, ವರದಿಗಳನ್ನು ಮತ್ತು ಇತರ ವಿವರಗಳನ್ನು ಒದಗಿಸತಕ್ಕದ್ದು.

(5) ವಿಶ್ವವಿದ್ಯಾನಿಲಯವು ತನ್ನ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು [1][ಕರ್ನಾಟಕ ಸರ್ಕಾರದಿಂದ][1] ಅಥವಾ ಯಾವುದೇ ಇತರ ರಾಜ್ಯಸರ್ಕಾರದಿಂದ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಶಾಸನಬದ್ಧ ನಿಕಾಯಗಳಿಂದ

ಅನುದಾನಗಳನ್ನು ಮತ್ತು ವಿಶ್ವವಿದ್ಯಾನಿಲಯದ ಮತ್ತು ದಾನಿಯ ಅಥವಾ ದೇಣಿಗೆದಾರನ ನಡುವೆ ಒಪ್ಪಂದ ಮಾಡಿಕೊಳ್ಳಬಹುದಾದಂಥ ಷರತ್ತುಗಳ ಪ್ರಕಾರ ದತ್ತಿಗಳನ್ನು ಅಥವಾ ದೇಣಿಗೆಗಳನ್ನು ಸ್ವೀಕರಿಸಲು ಸಕ್ಷಮವಾಗಿರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**36. ಲೆಕ್ಕಪರಿಶೋಧನೆಗೆ ಆದೇಶಿಸಲು ಸರ್ಕಾರದ ಅಧಿಕಾರ.–** ರಾಜ್ಯಸರ್ಕಾರವು ನಿರ್ದೇಶಿಸಬಹುದಾದಂಥ ಲೆಕ್ಕಪರಿಶೋಧಕರು ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮಾಡುವಂತೆ ಯಾವುದೇ ಕಾಲದಲ್ಲಿ ಆದೇಶಿಸಲು ಅದು ಅಧಿಕಾರವನ್ನು ಹೊಂದಿರತಕ್ಕದ್ದು.

**37. ಹಣಕಾಸು ಅಂದಾಜುಗಳು.–** (1) ಉಪ–ಕುಲಪತಿಯು, ಗೊತ್ತುಪಡಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಮುಂಬರುವ ವರ್ಷಕ್ಕಾಗಿ ವಿಶ್ವವಿದ್ಯಾನಿಲಯದ ಹಣಕಾಸು ಅಂದಾಜುಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಆ ಅಂದಾಜುಗಳನ್ನು ಮಂಡಳಿಯ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

(2) ಮಂಡಳಿಯು, ಹಣಕಾಸು ಅಂದಾಜುಗಳನ್ನು ಅದು ಸೂಕ್ತವೆಂದು ಭಾವಿಸುವಂಥ ಮಾರ್ಪಾಟುಗಳಿಗೊಳಪಟ್ಟು, ಅನುಮೋದಿಸಬಹುದು ಮತ್ತು ಮಂಡಳಿಯು ಅನುಮೋದಿಸಿದ ಹಣಕಾಸು ಅಂದಾಜುಗಳಿಗೆ ಅನುಸಾರವಾಗಿದ್ದ ಹೊರತು ಯಾವ ವೆಚ್ಚವನ್ನೂ ಮಾಡತಕ್ಕದ್ದಲ್ಲ.

**38. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಮತ್ತು ಜಮಾಖರ್ಚು ಪಟ್ಟಿಯನ್ನು ಉಪ–ಕುಲಪತಿಯ ನಿರ್ದೇಶನಕ್ಕನುಸಾರವಾಗಿ ಸಿದ್ಧಪಡಿಸತಕ್ಕದ್ದು ಮತ್ತು ಯಾವ ಮೂಲದಿಂದಾದರೂ ವಿಶ್ವವಿದ್ಯಾನಿಲಯಕ್ಕೆ ಪ್ರಾಪ್ತವಾಗುವ ಅಥವಾ ವಿಶ್ವವಿದ್ಯಾನಿಲಯವು ಸ್ವೀಕರಿಸಿದ ಮತ್ತು ವಿಶ್ವವಿದ್ಯಾನಿಲಯವು ವಿತರಣೆ ಮಾಡಿದ ಅಥವಾ ಸಂದಾಯ ಮಾಡಿದ ಎಲ್ಲ ಹಣವನ್ನು ಲೆಕ್ಕಪತ್ರಗಳಲ್ಲಿ ನಮೂದಿಸತಕ್ಕದ್ದು.

(2) ವಾರ್ಷಿಕ ಲೆಕ್ಕಪತ್ರಗಳನ್ನು ಮತ್ತು ಜಮಾಖರ್ಚು ಪಟ್ಟಿಯನ್ನು ಉಪ–ಕುಲಪತಿಯು ರಾಜ್ಯಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯಸರ್ಕಾರವು, ಈ ಸಂಬಂಧದಲ್ಲಿ ಗೊತ್ತುಮಾಡಬಹುದಾದಂಥ ವ್ಯಕ್ತಿಗಳಿಂದ ಲೆಕ್ಕಪರಿಶೋಧನೆಯನ್ನು ಮಾಡಿಸತಕ್ಕದ್ದು. ಲೆಕ್ಕಪರಿಶೋಧನೆಯಾದ ಲೆಕ್ಕಪತ್ರಗಳನ್ನು ಮುದ್ರಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಲೆಕ್ಕಪರಿಶೋಧನಾ ವರದಿಯ ಜೊತೆಗೆ, ಉಪ–ಕುಲಪತಿಯು ಮಂಡಳಿಗೆ ಮತ್ತು ಕುಲಪತಿಗೆ ಸಲ್ಲಿಸತಕ್ಕದ್ದು.

(3) ಮಂಡಳಿಯು, ಲೆಕ್ಕಪತ್ರಗಳ ಮತ್ತು ವರದಿಯ ಒಂದು ಪ್ರತಿಯನ್ನು, ಲೆಕ್ಕಪರಿಶೋಧನಾ ವರದಿಯ ಮೇಲೆ ವಿಶ್ವವಿದ್ಯಾನಿಲಯವು ತೆಗೆದುಕೊಂಡ ಕ್ರಮದ ವಿವರ ಪತ್ರದ ಸಹಿತ, ರಾಜ್ಯಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ರಾಜ್ಯಸರ್ಕಾರವು ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳಲ್ಲೂ ಮಂಡಿಸುವಂತೆ ಮಾಡತಕ್ಕದ್ದು.

## ಅಧ್ಯಾಯ–VI

## ಶಾಸನಗಳು ಮತ್ತು ವಿನಿಯಮನಗಳು

**39. ಶಾಸನಗಳು.–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಶಾಸನಗಳು ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು ಮತ್ತು ವಿಶೇಷವಾಗಿ ಈ ಕೆಳಕಂಡ ವಿಷಯಗಳಿಗೆ ಉಪಬಂಧ ಕಲ್ಪಿಸತಕ್ಕದ್ದು:–

(ಎ) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ರಚನೆ, ಅಧಿಕಾರಗಳು ಮತ್ತು ಕರ್ತವ್ಯಗಳು;

(ಬಿ) ಖಾಲಿಸ್ಥಾನಗಳನ್ನು ಭರ್ತಿಮಾಡುವುದನ್ನೂ ಒಳಗೊಂಡು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಸದಸ್ಯರ, ಮತ್ತು ವಿಶ್ವವಿದ್ಯಾನಿಲಯದ ಅಧಿಕಾರಿಗಳ, ಅಧ್ಯಾಪಕರ ಮತ್ತು ಇತರ ನೌಕರರ ನೇಮಕ ಮತ್ತು ಆ ಹುದ್ದೆಯಲ್ಲಿ ಅವರನ್ನು ಮುಂದುವರೆಸುವುದು ಮತ್ತು ಆ ಪ್ರಾಧಿಕಾರಗಳಿಗೆ ಮತ್ತು ಅಧಿಕಾರಿಗಳಿಗೆ, ಅಧ್ಯಾಪಕರಿಗೆ ಮತ್ತು ಇತರ ನೌಕರರಿಗೆ

ಸಂಬಂಧಪಟ್ಟಂತೆ ಉಪಬಂಧಿಸುವುದು ಅವಶ್ಯವಾಗಬಹುದಾದಂಥ ಅಥವಾ ಅಪೇಕ್ಷಣೀಯವಾಗಬಹುದಾದಂಥ ಎಲ್ಲ ಇತರ ವಿಷಯಗಳು;

(ಸಿ) ವಿಶ್ವವಿದ್ಯಾನಿಲಯದ ಅಧಿಕಾರಿಗಳ ಪದನಾಮ, ನೇಮಕಾತಿಯ ವಿಧಾನ, ಅಧಿಕಾರಗಳು ಮತ್ತು ಕರ್ತವ್ಯಗಳು;

(ಡಿ) ಅಧ್ಯಾಪಕರ ವರ್ಗೀಕರಣ ಮತ್ತು ನೇಮಕಾತಿಯ ವಿಧಾನ;

(ಇ) ವಿಶ್ವವಿದ್ಯಾನಿಲಯದ ಅಧಿಕಾರಿಗಳ, ಅಧ್ಯಾಪಕರುಗಳ ಮತ್ತು ಇತರ ನೌಕರರ ಅಧಿಕಾರಗಳು ಮತ್ತು ಕರ್ತವ್ಯಗಳು;

(ಎಫ್) ವಿಶ್ವವಿದ್ಯಾನಿಲಯದ ಅಧಿಕಾರಿಗಳ, ಅಧ್ಯಾಪಕರುಗಳ ಮತ್ತು ಇತರ ನೌಕರರ ಪ್ರಯೋಜನಕ್ಕಾಗಿ ನಿವೃತ್ತಿವೇತನ ನಿಧಿ, ಉಪದಾನ ನಿಧಿ ಮತ್ತು ಭವಿಷ್ಯನಿಧಿಯ ರಚನೆ;

(ಜಿ) ಘಟಿಕೋತ್ಸವಗಳನ್ನು ನಡೆಸುವುದು ಮತ್ತು ಪದವಿಗಳನ್ನು ಪ್ರದಾನ ಮಾಡುವುದು ಮತ್ತು ಡಿಪ್ಲೋಮಾಗಳನ್ನು ನೀಡುವುದು;

(ಎಚ್) ಪದವಿಗಳನ್ನು ಮತ್ತು ಡಿಪ್ಲೋಮಾಗಳನ್ನು ಪ್ರಾರಂಭಿಸುವುದು;

(ಐ) ಗೌರವ ಪದವಿಗಳನ್ನು ಪ್ರದಾನ ಮಾಡುವುದು;

(ಜೆ) ವಿಭಾಗಗಳ ಸ್ಥಾಪನೆ, ಸಂಯೋಜನೆ, ಉಪವಿಭಾಗ ಮತ್ತು ರದ್ದಿಯಾತಿ;

(ಕೆ) ವಿದ್ಯಾರ್ಥಿ ನಿಲಯಗಳ ಸ್ಥಾಪನೆ ಮತ್ತು ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ರದ್ದಿಯಾತಿ;

(ಎಲ್) ಸ್ನಾತಕೋತ್ತರ ವಿದ್ಯಾರ್ಥಿ ವೇತನಗಳನ್ನು, ವಿದ್ಯಾರ್ಥಿವೇತನಗಳನ್ನು, ಶಿಷ್ಯವೇತನಗಳನ್ನು, ಪದಕಗಳನ್ನು ಮತ್ತು ಬಹುಮಾನಗಳನ್ನು ಪ್ರಾರಂಭಿಸುವುದು;

(ಎಂ) ನೋಂದಾಯಿತ ಪದವೀಧರರ ರಿಜಿಸ್ಟರನ್ನು ಇಡುವುದು;

(ಎನ್) ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ ಮತ್ತು ಅವರ ದಾಖಲಾತಿ ಮತ್ತು ಹಾಗೆ ಅವರ ಮುಂದುವರಿಕೆ;

(ಓ) ವಿಶ್ವವಿದ್ಯಾನಿಲಯದ ಪದವಿಗಳಿಗೆ ಮತ್ತು ಡಿಪ್ಲೋಮಗಳಿಗೆ ಗೊತ್ತುಪಡಿಸಬಹುದಾದ ವ್ಯಾಸಂಗ ಕ್ರಮಗಳು;

(ಪಿ) ವಿಶ್ವವಿದ್ಯಾನಿಲಯದ ಪದವಿ, ಡಿಪ್ಲೋಮಾ ಅಥವಾ ಇತರ ವ್ಯಾಸಂಗ ಕ್ರಮಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಮತ್ತು ಪರೀಕ್ಷೆಗಳನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಅನುಮತಿಸತಕ್ಕ ಷರತ್ತುಗಳು ಮತ್ತು ಪದವಿಗಳನ್ನು ಪ್ರದಾನ ಮಾಡಲು ಮತ್ತು ಡಿಪ್ಲೋಮಾಗಳನ್ನು ನೀಡಲು ಅರ್ಹತೆಯ ನಿರ್ಧಾರ;

(ಕ್ಯು) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸಗಳ ಸ್ಥಿತಿ ಮತ್ತು ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ವಾಸಕ್ಕಾಗಿ ಶುಲ್ಕಗಳನ್ನು ವಿಧಿಸುವುದು;

(ಆರ್) ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿಲ್ಲದ ವಿದ್ಯಾರ್ಥಿ ನಿಲಯಗಳನ್ನು ಗುರುತಿಸುವುದು ಮತ್ತು ಅವುಗಳ ಮೇಲ್ವಿಚಾರಣೆ;

(ಎಸ್) ವಿಶ್ವವಿದ್ಯಾನಿಲಯದ ಅಧಿಕಾರಿಗಳ, ಅಧ್ಯಾಪಕರುಗಳ ಮತ್ತು ಇತರ ನೌಕರರ ಸಂಖ್ಯೆ, ಅರ್ಹತೆಗಳು, ವೇತನ, ಇತ್ಯಾದಿಗಳು ಮತ್ತು ಇತರ ಸೇವಾ ಷರತ್ತುಗಳು ಮತ್ತು ಅವರ ಸೇವೆಗಳು ಮತ್ತು ಕಾರ್ಯ ಚಟುವಟಿಕೆಗಳ ದಾಖಲೆಗಳ ಸಿದ್ಧತೆ ಮತ್ತು ನಿರ್ವಹಣೆ;

(ಟಿ) ಯಾವುದೇ ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯವು ವಿಧಿಸಬಹುದಾದ ಶುಲ್ಕಗಳು;

(ಯು) ಯಾವ ಷರತ್ತುಗಳಿಗೊಳಪಟ್ಟು ವ್ಯಕ್ತಿಗಳನ್ನು ವಿದ್ಯಾರ್ಥಿನಿಲಯಗಳಲ್ಲಿ ಶಿಕ್ಷಣ ನೀಡಲು ಅರ್ಹರೆಂದು ಗುರುತಿಸಬಹುದೋ ಆ ಷರತ್ತುಗಳು;

(ವಿ) ಪರೀಕ್ಷಾ ನಿಕಾಯಗಳು, ಪರೀಕ್ಷಕರು ಮತ್ತು ಮೇಲು ಪರೀಕ್ಷಕರ ನೇಮಕದ ಷರತ್ತುಗಳು ಮತ್ತು ವಿಧಾನ ಮತ್ತು ಕರ್ತವ್ಯಗಳು;

(ಡಬ್ಲ್ಯೂ) ಪರೀಕ್ಷೆಗಳನ್ನು ನಡೆಸುವುದು;

(ಎಕ್ಸ್) ವಿಶ್ವವಿದ್ಯಾನಿಲಯದ ಕೆಲಸ ಕಾರ್ಯಗಳಿಗೆ ನಿಯೋಜಿಸಿದ ವ್ಯಕ್ತಿಗಳಿಗೆ ಸಂದಾಯ ಮಾಡಬೇಕಾದ ಪ್ರಯಾಣ ಮತ್ತು ದಿನಭತ್ಯಗಳೂ ಸೇರಿದಂತೆ ಸಂಭಾವನೆ ಮತ್ತು ಭತ್ಯೆಗಳು;

(ವೈ) ಸ್ನಾತಕೋತ್ತರ ವಿದ್ಯಾರ್ಥಿ ವೇತನಗಳನ್ನು, ವಿದ್ಯಾರ್ಥಿವೇತನಗಳನ್ನು, ಪದಕಗಳನ್ನು ಮತ್ತು ಬಹುಮಾನಗಳನ್ನು, ನಿಯತ ವೇತನಗಳನ್ನು ಮತ್ತು ಶುಲ್ಕ ರಿಯಾಯಿತಿಗಳನ್ನು ನೀಡುವುದಕ್ಕೆ ಷರತ್ತುಗಳು; ಮತ್ತು

(ಜೆಡ್) ಈ ಅಧಿನಿಯಮದ ಮೂಲಕ ಅಥವಾ ಶಾಸನಗಳ ಮೂಲಕ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದ ಎಲ್ಲ ಇತರ ವಿಷಯಗಳು.

**40. ಶಾಸನಗಳ ರಚನೆ ಹೇಗೆ.–** (1) 39ನೇ ಪ್ರಕರಣದಲ್ಲಿ ಹೇಳಿರುವ ವಿಷಯಗಳಿಗೆ ಸಂಬಂಧಿಸಿದಂತೆ, ಮೊದಲ ಶಾಸನಗಳನ್ನು ಉಪ–ಕುಲಪತಿಯು ಕುಲಪತಿಯ ಅನುಮೋದನೆಯೊಂದಿಗೆ ರಚಿಸತಕ್ಕದ್ದು.

(2) ಮಂಡಳಿಯು, ಕಾಲಕಾಲಕ್ಕೆ ಹೊಸ ಅಥವಾ ಹೆಚ್ಚುವರಿ ಶಾಸನಗಳನ್ನು ರಚಿಸಬಹುದು ಮತ್ತು ಇಲ್ಲಿ ಇನ್ನುಮುಂದೆ ಈ ಪ್ರಕರಣದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಶಾಸನಗಳನ್ನು ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

(3) ಮಂಡಳಿಯು ಅಂಗೀಕರಿಸಬೇಕಾದ ಯಾವುದೇ ಶಾಸನದ ಕರಡನ್ನು ಶೈಕ್ಷಣಿಕ ಪರಿಷತ್ತು ಮಂಡಳಿಗೆ ಪ್ರಸ್ತಾವಿಸಬಹುದು ಮತ್ತು ಅಂಥ ಕರಡನ್ನು ಮಂಡಳಿಯು ಅದರ ಮುಂದಿನ ಸಭೆಯಲ್ಲಿ ಪರ್ಯಾಲೋಚಿಸತಕ್ಕದ್ದು:

ಪರಂತು, ಶೈಕ್ಷಣಿಕ ಪರಿಷತ್ತು, ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಸ್ಥಾನಮಾನಕ್ಕೆ, ಅಧಿಕಾರಗಳಿಗೆ ಅಥವಾ ರಚನೆಗೆ ಧಕ್ಕೆ ತರುವ ಯಾವುದೇ ಶಾಸನದ ಅಥವಾ ಶಾಸನದ ಯಾವುದೇ ತಿದ್ದುಪಡಿಯ ಕರಡನ್ನು, ಅಂಥ ಪ್ರಾಧಿಕಾರಕ್ಕೆ ಆ ಪ್ರಸ್ತಾವನೆ ಬಗ್ಗೆ ಅದರ ಅಭಿಪ್ರಾಯವನ್ನು ವ್ಯಕ್ತಪಡಿಸಲು ಒಂದು ಅವಕಾಶವನ್ನು ಕೊಟ್ಟಹೊರತು, ಪ್ರಸ್ತಾವಿಸತಕ್ಕದ್ದಲ್ಲ ಮತ್ತು ಹಾಗೆ ವ್ಯಕ್ತಪಡಿಸಿದ ಯಾವುದೇ ಅಭಿಪ್ರಾಯವನ್ನು ಮಂಡಳಿಯು ಪರ್ಯಾಲೋಚಿಸತಕ್ಕದ್ದು.

(4) ಮಂಡಳಿಯು (3)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಕರಡನ್ನು ಅನುಮೋದಿಸಬಹುದು ಮತ್ತು ಶಾಸನವನ್ನು ಅಂಗೀಕರಿಸಬಹುದು ಅಥವಾ ಅದನ್ನು ತಿರಸ್ಕರಿಸಬಹುದು ಅಥವಾ ಅದು ಸೂಚಿಸಬಹುದಾದ ಯಾವುದೇ ತಿದ್ದುಪಡಿಗಳೊಂದಿಗೆ ಪೂರ್ಣವಾಗಿ ಅಥವಾ ಭಾಗಶಃ ಮರು ಪರಿಗಣನೆಗಾಗಿ ಅದನ್ನು ಶೈಕ್ಷಣಿಕ ಪರಿಷತ್ತಿಗೆ ಹಿಂದಿರುಗಿಸಬಹುದು.

(5) ಮಂಡಳಿಯ ಯಾವನೇ ಸದಸ್ಯನು, ಯಾವುದೇ ಶಾಸನದ ಕರಡನ್ನು ಮಂಡಳಿಗೆ ಪ್ರಸ್ತಾವಿಸಬಹುದು ಮತ್ತು ಮಂಡಳಿಯ ಪ್ರಸ್ತಾವವು ಶೈಕ್ಷಣಿಕ ಪರಿಷತ್ತಿನ ವ್ಯಾಪ್ತಿಗೊಳಪಡದ ವಿಷಯಕ್ಕೆ ಸಂಬಂಧಪಟ್ಟಿದ್ದರೆ ಅದನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು. ಶೈಕ್ಷಣಿಕ ಪರಿಷತ್ತಿನ ವ್ಯಾಪ್ತಿಗೊಳಪಡುವ ವಿಷಯಕ್ಕೆ ಅಂಥ ಕರಡು ಸಂಬಂಧಪಟ್ಟಿದ್ದಲ್ಲಿ, ಮಂಡಳಿಯು ಅದನ್ನು ಶೈಕ್ಷಣಿಕ ಪರಿಷತ್ತಿನ ಪರ್ಯಾಲೋಚನೆಗಾಗಿ ಒಪ್ಪಿಸತಕ್ಕದ್ದು. ಪರಿಷತ್ತು ಪ್ರಸ್ತಾವವನ್ನು ಅನುಮೋದಿಸಿಲ್ಲವೆಂದು ಮಂಡಳಿಗೆ ವರದಿ ಮಾಡಬಹುದು, ಆನಂತರ ಮಂಡಳಿಯು ಅದನ್ನು ತಿರಸ್ಕರಿಸಿದೆ

ಎಂದು ಭಾವಿಸತಕ್ಕದ್ದು ಅಥವಾ ಕರಡನ್ನು ಶೈಕ್ಷಣಿಕ ಪರಿಷತ್ತು ಅನುಮೋದಿಸಬಹುದಾದಂಥ ರೀತಿಯಲ್ಲಿ ಮಂಡಳಿಗೆ ಸಲ್ಲಿಸತಕ್ಕದ್ದು ಮತ್ತು ಈ ಪ್ರಕರಣದ ಉಪಬಂಧಗಳು, ಹಾಗೆ ಸಲ್ಲಿಸಿದ ಕರಡಿನ ಸಂಬಂಧದಲ್ಲಿ ಕರಡನ್ನು ಶೈಕ್ಷಣಿಕ ಪರಿಷತ್ತು ಮಂಡಳಿಗೆ ಪ್ರಸ್ತಾವಿಸಿದ್ದಲ್ಲಿ ಅನ್ವಯವಾಗುತ್ತಿದ್ದ ಹಾಗೆ ಅನ್ವಯವಾಗತಕ್ಕದ್ದು.

(6) ಒಂದು ಹೊಸ ಶಾಸನ ಅಥವಾ ಶಾಸನಗಳಿಗೆ ಸೇರ್ಪಡೆಗೆ ಅಥವಾ ಶಾಸನಗಳ ಯಾವುದೇ ತಿದ್ದುಪಡಿಗೆ ಅಥವಾ ನಿರಸನಕ್ಕೆ ಕುಲಪತಿಯ ಪೂರ್ವ ಅನುಮೋದನೆ ಅಗತ್ಯವಿರತಕ್ಕದ್ದು. ಆತನು ಅದನ್ನು ಮಂಜೂರು ಮಾಡಬಹುದು, ತಿರಸ್ಕರಿಸಬಹುದು ಅಥವಾ ಹೆಚ್ಚಿನ ಪರ್ಯಾಲೋಚನೆಗಾಗಿ ಅದನ್ನು ಹಿಂದಕ್ಕೆ ಕಳುಹಿಸಬಹುದು.

(7) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ಶಾಸನವನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

**41. ವಿನಿಯಮನಗಳು.–** (1) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮಕ್ಕೆ ಮತ್ತು ಶಾಸನಗಳಿಗೆ ಸುಸಂಗತವಾಗಿರುವ ವಿನಿಯಮನಗಳನ್ನು ರಚಿಸಬಹುದು, ಎಂದರೆ:–

(ಎ) ಅವುಗಳ ಸಭೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಕೋರಂಗೆ ಅಗತ್ಯವಿರುವ ಸದಸ್ಯರ ಸಂಖ್ಯೆಯನ್ನು ಗೊತ್ತುಪಡಿಸುವುದು;

(ಬಿ) ಈ ಅಧಿನಿಯಮದ ಅಥವಾ ಶಾಸನಗಳ ಮೂಲಕ ವಿನಿಯಮನಗಳಿಂದ ಅವಕಾಶ ಕಲ್ಪಿಸಬೇಕಾದ ವಿಷಯಗಳ ಬಗ್ಗೆ ಉಪಬಂಧಿಸುವುದು;

(ಸಿ) ಅಂಥ ಪ್ರಾಧಿಕಾರಗಳಿಗೆ ಮಾತ್ರವೇ ಸಂಬಂಧಪಟ್ಟ ಮತ್ತು ಈ ಅಧಿನಿಯಮದ ಮತ್ತು ಶಾಸನಗಳ ಮೂಲಕ ಅವಕಾಶ ಕಲ್ಪಿಸದೇ ಇರುವ ಯಾವುದೇ ಇತರ ವಿಷಯದ ಬಗ್ಗೆ ಉಪಬಂಧಿಸುವುದು.

(2) ವಿಶ್ವವಿದ್ಯಾನಿಲಯದ ಪ್ರತಿಯೊಂದು ಪ್ರಾಧಿಕಾರವು, ಅಂಥ ಪ್ರಾಧಿಕಾರದ ಸದಸ್ಯರಿಗೆ ಸಭೆಯ ದಿನಾಂಕಗಳ ಮತ್ತು ಆ ಸಭೆಯಲ್ಲಿ ಪರ್ಯಾಲೋಚಿಸಬೇಕಾದ ಕಾರ್ಯಕಲಾಪದ ಬಗ್ಗೆ ನೋಟೀಸು ನೀಡುವ ಮತ್ತು ಸಭೆಗಳ ನಡವಳಿಗಳ ದಾಖಲೆಯನ್ನು ಇಡುವ ಬಗ್ಗೆ ಉಪಬಂಧಿಸುವ ವಿನಿಯಮನಗಳನ್ನು ರಚಿಸತಕ್ಕದ್ದು.

(3) ಶೈಕ್ಷಣಿಕ ಪರಿಷತ್ತು, ಶಾಸನಗಳ ಉಪಬಂಧಗಳಿಗೊಳಪಟ್ಟು, ಸಂಬಂಧಪಟ್ಟ ಅಧ್ಯಯನ ಮಂಡಳಿಗಳಿಂದ ವ್ಯಾಸಂಗ ಕ್ರಮಗಳಿಗೆ, ಪರೀಕ್ಷಾ ಪದ್ಧತಿಗಳಿಗೆ ಮತ್ತು ವಿಶ್ವವಿದ್ಯಾನಿಲಯದ ಪದವಿಗಳಿಗೆ ಮತ್ತು ಡಿಪ್ಲೋಮಾಗಳಿಗೆ ಅವಕಾಶ ಕಲ್ಪಿಸುವ ಕರಡುಗಳನ್ನು ಸ್ವೀಕರಿಸಿದ ತರುವಾಯ ವಿನಿಯಮನಗಳನ್ನು ರಚಿಸಬಹುದು.

(4) ಶೈಕ್ಷಣಿಕ ಪರಿಷತ್ತು ಅಧ್ಯಯನಗಳ ಮಂಡಳಿಯಿಂದ ಸ್ವೀಕರಿಸಿದ ಕರಡನ್ನು ಬದಲಿಸದೇ ಇರಬಹುದು, ಆದರೆ ಅದನ್ನು ತಿರಸ್ಕರಿಸಬಹುದು ಅಥವಾ ಅದನ್ನು ಹೆಚ್ಚಿನ ಪರ್ಯಾಲೋಚನೆಗಾಗಿ, ಪರಿಷತ್ತಿನ ಸಲಹೆಗಳ ಸಹಿತ ಅಧ್ಯಯನಗಳ ಮಂಡಳಿಗೆ ಹಿಂದಿರುಗಿಸಬಹುದು.

(5) ಮಂಡಳಿಯು, ಅದು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಈ ಪ್ರಕರಣದ ಅಡಿಯಲ್ಲಿ ರಚಿಸಲಾದ ಯಾವುದೇ ವಿನಿಯಮನದ ತಿದ್ದುಪಡಿಗೆ ಅಥವಾ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರವು (1)ನೇ ಉಪ–ಪ್ರಕರಣದ ಅಡಿಯಲ್ಲಿ ರಚಿಸಿದ ಯಾವುದೇ ವಿನಿಯಮನದ ರದ್ದಿಯಾತಿಗೆ ನಿರ್ದೇಶಿಸಬಹುದು.

## ಅಧ್ಯಾಯ - VII

## ಸಂಕೀರ್ಣ

**42. ಪದವನ್ನು ತೆರವು ಮಾಡುವುದು.–** (1) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ, ಯಾವನೇ ಸದಸ್ಯನು, ರಿಜಿಸ್ಟ್ರಾರನಿಗೆ ಪತ್ರ ಬರೆಯುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ಸಲ್ಲಿಸಬಹುದು.

(2) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಯಾವನೇ ಸದಸ್ಯನು ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧಕ್ಕಾಗಿ ನ್ಯಾಯಾಲಯದಿಂದ ಸಿದ್ಧದೋಷಿಯಾದರೆ, ಅವನು ಸದಸ್ಯನಾಗಿರುವುದು ನಿಂತುಹೋಗತಕ್ಕದ್ದು.

**43. ಆಕಸ್ಮಿಕ ಖಾಲಿಸ್ಥಾನಗಳನ್ನು ಭರ್ತಿ ಮಾಡುವುದು.–** ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಸದಸ್ಯನ (ಪದನಿಮಿತ್ತ ಸದಸ್ಯನ್ನು ಹೊರತುಪಡಿಸಿ) ಪದಾವಧಿಯು ಮುಗಿಯುವ ಮೊದಲು ಯಾವುದೇ ಸ್ಥಾನ ಖಾಲಿಯಾದರೆ ಆ ಖಾಲೀಸ್ಥಾನವನ್ನು ಅನುಕೂಲವಾಗುವಂತೆ ಆದಷ್ಟು  ಬೇಗನೆ, ಭರ್ತಿ ಮಾಡತಕ್ಕದ್ದು.

**44. ಕೃತ್ಯಗಳ ಮತ್ತು  ವ್ಯವಹರಣೆಗಳ ಸಿಂಧುತ್ವದ ಉಳಿಸುವಿಕೆ.–** ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ವ್ಯವಹರಣೆಗಳನ್ನು,–

(ಎ) ಯಾವುದೇ ಖಾಲಿಸ್ಥಾನದ ಅಥವಾ ಯಾವುದೇ ಪ್ರಾಧಿಕಾರದ ರಚನೆಯಲ್ಲಿನ ದೋಷದ; ಅಥವಾ

(ಬಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಿರುವಂಥ ಕೃತ್ಯದ ಅಥವಾ ವ್ಯವಹರಣೆಯ ಯಾವುದೇ ದೋಷದ ಅಥವಾ ಕ್ರಮ ದೋಷದ

– ಆಧಾರದ ಮೇಲೆ ಮಾತ್ರವೇ ಪ್ರಶ್ನಿಸತಕ್ಕದ್ದಲ್ಲ.

**45. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ರಚನೆಯ ಬಗ್ಗೆ ವಿವಾದಗಳು.–** ಈ ಅಧಿನಿಯಮದ ಅಥವಾ ಯಾವುದೇ ಶಾಸನದ ಅಥವಾ ವಿನಿಯಮನದ ಯಾವುದೇ ಉಪಬಂಧದ ಅರ್ಥವಿವರಣೆಯ ಬಗ್ಗೆ ಅಥವಾ ವ್ಯಕ್ತಿಯನ್ನು ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಸದಸ್ಯನಾಗಿ ಕ್ರಮಬದ್ಧವಾಗಿ ನೇಮಕ ಮಾಡಲಾಗಿದೆಯೇ ಅಥವಾ ಆತನು ಸದಸ್ಯನಾಗಲು ಹಕ್ಕುಳ್ಳವನಾಗಿದ್ದಾನೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಆ ವಿಷಯವನ್ನು ಕುಲಪತಿಗೆ ಒಪ್ಪಿಸಬಹುದು ಮತ್ತು ಮಂಡಳಿಯ ಆರು ಸದಸ್ಯರು ಆ ವಿಷಯವನ್ನು ಕುಲಪತಿಗೆ ಒಪ್ಪಿಸಬೇಕೆಂದು ಅಗತ್ಯಪಡಿಸಿದರೆ, ಆತನಿಗೆ ಆ ವಿಷಯವನ್ನು ಒಪ್ಪಿಸತಕ್ಕದ್ದು. ಕುಲಪತಿಯು, ಅವನು ಅವಶ್ಯವೆಂದು ಭಾವಿಸುವಂಥ ಸಲಹೆಯನ್ನು ಪಡೆದುಕೊಂಡ ತರುವಾಯ, ಆ ಪ್ರಶ್ನೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕದ್ದು ಮತ್ತು ಆತನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**46. ಅಧಿಕಾರಗಳ ಪ್ರತ್ಯಾಯೋಜನೆ.–** ಮಂಡಳಿಯು ಈ ಅಧಿನಿಯಮದ ಮೂಲಕ ಈ ಅಥವಾ ಶಾಸನಗಳ ಮೂಲಕ ಅದಕ್ಕೆ ಪ್ರದತ್ತವಾದ ಚಲಾಯಿಸಬೇಕಾದ ಯಾವುವೇ ಅಧಿಕಾರಗಳನ್ನು ಗೊತ್ತುಪಡಿಸಬಹುದಾದಂಥ ಕಟ್ಟುಪಾಡುಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ವಿಶ್ವವಿದ್ಯಾನಿಲಯದ ಯಾವನೇ ಅಧಿಕಾರಿಗೆ ಅಥವಾ ಪ್ರಾಧಿಕಾರಿಗೆ ಶಾಸನಗಳ ಮೂಲಕ ಪ್ರತ್ಯಾಯೋಜಿಸಬಹುದು.

**47. ವಿಶ್ವವಿದ್ಯಾನಿಲಯದ ಕೆಲವು ಅಧಿಕಾರಿಗಳ ತಾತ್ಕಾಲಿಕ ನೇಮಕಕ್ಕೆ ಉಪಬಂಧ.–**ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾಗಿ ಕ್ರಮಬದ್ಧವಾಗಿ ರಚಿತವಾಗುವ ಅಂಥ ಕಾಲದವರೆಗೆ, ಉಪ–ಕುಲಪತಿಯು ವಿಶ್ವವಿದ್ಯಾನಿಲಯದ ಯಾರೇ ಅಧಿಕಾರಿಯನ್ನು ತಾತ್ಕಾಲಿಕವಾಗಿ ನೇಮಕ ಮಾಡಬಹುದು. ಅಂಥ ನೇಮಕಕ್ಕೆ ಮತ್ತು ಅದರ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಕುಲಪತಿಯ ಪೂರ್ವ ಅನುಮೋದನೆ ಇರತಕ್ಕದ್ದು.

[1][47ಎ. **ಸಮನ್ವಯ ಸಮಿತಿ.–** [2][(1) ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳಿಗೆ ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡ ಒಂದು ಸಮನ್ವಯ ಸಮಿತಿ ಇರತಕ್ಕದ್ದು, ಎಂದರೆ.–

1. 47ಎ ಪ್ರಕರಣವನ್ನು 1986ರ ಅಧಿನಿಯಮ 14ರ ಮೂಲಕ 1.10.1986 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1987ರ ಅಧಿನಿಯಮ 40ರ ಮೂಲಕ 31.12.1987 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(i) ಸಹ–ಕುಲಪತಿ – ಅಧ್ಯಕ್ಷನಾಗಿರತಕ್ಕದ್ದು;

(ii) ಉಪ–ಕುಲಪತಿಗಳು;

(iii) ಕರ್ನಾಟಕ ಸರ್ಕಾರದ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿ;

(iv) ಡೀನ್‌ಗಳು;

(v) ಸಂಶೋಧನಾ ನಿರ್ದೇಶಕರು;

(vi) ವಿಸ್ತರಣಾ ನಿರ್ದೇಶಕರು; ಮತ್ತು

(vii) ರಿಜಿಸ್ಟ್ರಾರರು.

ಅಧ್ಯಕ್ಷರು ರಿಜಿಸ್ಟ್ರಾರುಗಳಲ್ಲಿ ಒಬ್ಬನನ್ನು ಸರದಿಯ ಮೇಲೆ ಒಂದು ವರ್ಷದ ಅವಧಿಗೆ ಸಮಿತಿಯ ಕಾರ್ಯದರ್ಶಿಯಾಗಿ ನೇಮಕ ಮಾಡತಕ್ಕದ್ದು.][2]

(2) ಸಮಿತಿಯು, ರಾಜ್ಯದಲ್ಲಿ ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಮತ್ತು ಯಾವುದೇ ಇತರ ಶೈಕ್ಷಣಿಕ ವಿಷಯಗಳ ಮೇಲೆ ಚರ್ಚೆ ಮಾಡತಕ್ಕದ್ದು ಮತ್ತು ಶಿಫಾರಸುಗಳನ್ನು ಮಾಡತಕ್ಕದ್ದು.

(3) ಉಪ–ಕುಲಪತಿಗಳು ಸಮಿತಿಯು ಮಾಡಿದ ಶಿಫಾರಸುಗಳ ಅನುಷ್ಠಾನಕ್ಕೆ ಅವಶ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು][1]

**48. ಕೃತ್ಯಗಳು ಮತ್ತು ಆದೇಶಗಳ ರಕ್ಷಣೆ.–** (1) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನುಳಿದು, ವಿಶ್ವವಿದ್ಯಾನಿಲಯವು ಅಥವಾ ಅದರ ಯಾವುದೇ ಪ್ರಾಧಿಕಾರಗಳು ಸದ್ಭಾವನೆಯಿಂದ ಕೈಗೊಂಡ ಎಲ್ಲ ಕೃತ್ಯಗಳು ಮತ್ತು ಹೊರಡಿಸಿದ ಆದೇಶಗಳು ಅಂತಿಮವಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಿದ ಶಾಸನಗಳಿಗೆ ಮತ್ತು ವಿನಿಯಮನಗಳಿಗೆ ಅನುಸಾರವಾಗಿ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕೃತ್ಯದ ಬಗ್ಗೆ ವಿಶ್ವವಿದ್ಯಾನಿಲಯದ ಅಥವಾ ಅದರ ಪ್ರಾಧಿಕಾರಗಳ ವಿರುದ್ಧ ದಾವೆ ಹೂಡತಕ್ಕದ್ದಲ್ಲ ಅಥವಾ ಅವುಗಳಿಂದ ಯಾವುದೇ ನಷ್ಟ ಭರ್ತಿಗೆ ಕ್ಲೇಮು ಮಾಡತಕ್ಕದ್ದಲ್ಲ.

(2) (ಎ) ಮಂಡಳಿಯ ಪೂರ್ವ ಮಂಜೂರಾತಿ ಇಲ್ಲದೆ, ಈ ಅಧಿನಿಯಮದ ಅಥವಾ ಶಾಸನಗಳ ಅಥವಾ ವಿನಿಯಮನಗಳ ಅಡಿಯಲ್ಲಿ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕೃತ್ಯಕ್ಕಾಗಿ, ವಿಶ್ವವಿದ್ಯಾನಿಲಯದ ಯಾವನೇ ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(ಬಿ) ವಿಶ್ವವಿದ್ಯಾನಿಲಯದ ಯಾವನೇ ಅಧಿಕಾರಿಯು ಅಥವಾ ಇತರ ನೌಕರನು ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಥವಾ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಯಾವುದೇ ಅಂಥ ಕೃತ್ಯವನ್ನು ಸದ್ಭಾವನೆಯಿಂದ ಮಾಡಿದ್ದಲ್ಲಿ, ಆ ಕಾರ್ಯದ ಸಂಬಂಧದಲ್ಲಿ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗೆ ಗುರಿಯಾಗತಕ್ಕದ್ದಲ್ಲ.

**49. ತೊಂದರೆಗಳ ನಿವಾರಣೆ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ತನಗೆ ಅವಶ್ಯವೆಂದು ಕಂಡುಬರುವ ಯಾವುದೇ ಕ್ರಮವನ್ನು ಕೈಗೊಳ್ಳಬಹುದು.

(2) (1)ನೇ ಉಪ–ಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ಆದೇಶವನ್ನು, ಸದರಿ ಉಪ–ಪ್ರಕರಣದಲ್ಲಿ ಉಲ್ಲೇಖಿಸಿರುವಂಥ ಯಾವ ತೊಂದರೆಯೂ ಉಂಟಾಗಿರಲಿಲ್ಲವೆಂಬ ಅಥವಾ ಅದನ್ನು ನಿವಾರಿಸುವ ಅಗತ್ಯವಿರಲಿಲ್ಲವೆಂಬ ಕಾರಣದ ಮೇಲೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(3) ಈ ಪ್ರಕರಣದ ಅಡಿಯಲ್ಲಿ ಪ್ರಕಟಿಸಿದ ಪ್ರತಿಯೊಂದು ಆದೇಶವನ್ನು, ಅದರ ಪ್ರಕಟಣೆಯ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಉಭಯಸದನಗಳ ಮುಂದೆ ಮಂಡಿಸತಕ್ಕದ್ದು.

## ಅಧಿಸೂಚನೆಗಳು

**I**

**ಬೆಂಗಳೂರು, ದಿನಾಂಕ 22ನೇ ಏಪ್ರಿಲ್, 1964 [ಸಂ. ಎಎಫ್ 229 ಎಎಂಎಲ್ 63]**

**ಎಸ್.ಓ.602.–** ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ ಸಂ. 22)ರ 1ನೇ ಪ್ರಕರಣದ (3)ನೇ ಉಪ–ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1964ರ ಏಪ್ರಿಲ್ 24ನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ವೈ.ಸಿ. ಹೊಂಬಾಳಯ್ಯ**

ಕಾರ್ಯದರ್ಶಿ.

**II**

**ಬೆಂಗಳೂರು, ದಿನಾಂಕ 9ನೇ ಸೆಪ್ಟೆಂಬರ್, 1986 [ಸಂ. ಎಎಚ್‌ಡಿ 65 ಎಯುಎಂ. 86]**

ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ಅಧಿನಿಯಮ, 1986ರ (1986ರ ಕರ್ನಾಟಕ ಅಧಿನಿಯಮ 14) 1ನೇ ಪ್ರಕರಣದ (2)ನೇ ಉಪ–ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 1986ರ ಅಕ್ಟೋಬರ್ ಮೊದಲನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ವಿಜಯಕುಮಾರ್ ಪಿ. ರೇವಡಿ**
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಮತ್ತು ತೋಟಗಾರಿಕೆ ಇಲಾಖೆ.

The above translation of the Karnataka University of Agricultural Sciences Act, 1963 (22 of 1963) shall be authoritative text in the Kannada Language under section 5A of the Karnataka Official Language Act, 1963.

Governor of Karnataka

ಭಾರತದ ರಾಷ್ಟ್ರಪತಿಯವರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.